ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೫ – ೨೨ –2024ರ ನಡವಳಿಗಳು

ವಿಷಯದ ಸಂಖ್ಯೆ: 166/2024-25

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2024ನೇ ಸಾಲಿಗೆ ಪಾಲಿಕೆಯ ಶಿಕ್ಷಣ ಇಲಾಖೆಯ ವತಿಯಿಂದ ದಿನಾಂಕ: 05–09–2024 ರಂದು "ಶಿಕ್ಷಕರ ದಿನಾಚರಣೆ" ಮತ್ತು "ಪ್ರತಿಭಾ ಪುರಸ್ಕಾರ" ಹಾಗೂ ನಿವೃತ್ತ ಶಿಕ್ಷಕರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಸರ್॥ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಆಯೋಜಿಸಲಾಗಿರುತ್ತದೆ.

ಸದರಿ ಕಾರ್ಯಕ್ರಮವನ್ನು ಆಯೋಜಿಸಲು ವೆಚ್ಚವಾಗುವ ಮೊತ್ತದ ವಿವರ.

ಕ್ರ ಸಂ.	ವೆಚ್ಚದ ವಿವರಗಳು	ಅಂದಾಜು ಮೊತ್ತ ರೂ
1	2023–24ನೇ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 85% ಕ್ಕಿಂತ ಹೆಚ್ಚು ಅಂಕ ಪಡೆದ ಒಬ್ಬ ವಿದ್ಯಾರ್ಥಿಗೆ 25,000/– ರೂ ಗಳಂತೆ ಒಟ್ಟು 73 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಸದರಿ ವಿದ್ಯಾರ್ಥಿಗಳ ಪ್ರೋತ್ಸಾಹ ಧನವನ್ನು ಬ್ಯಾಂಕ್ ಖಾತೆಗಳಿಗೆ ಆರ್.ಟಿ.ಜಿ.ಎಸ್. ಮೂಲಕ ವರ್ಗಾಹಿಸಲು ಆಗುವ ಮೊತ್ತ.	1825000
2	2023–24ನೇ ಸಾಲಿನ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 85% ಕ್ಕಿಂತ ಹೆಚ್ಚು ಅಂಕ ಪಡೆದ ಒಬ್ಬ ವಿದ್ಯಾರ್ಥಿಗೆ 35,000/– ರೂ ಗಳಂತೆ ಒಟ್ಟು 227 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಮತ್ತು ಅಂತಿಮ ಪದವಿಯಲ್ಲಿ 6 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ತಲಾ 50,000/– ಗಳಂತೆ ಆರು ಮಂದಿಗೆ 3,00,000/– ಗಳನ್ನು ಒಟ್ಟು 231 ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಆರ್.ಟಿ.ಜಿ.ಎಸ್. ಮೂಲಕ ವರ್ಗಾಹಿಸಲು ಆಗುವ ಮೊತ್ತ.	8245000
3	ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿ ನಿವೃತ್ತಿಹೊಂದಿರುವ ಶಿಕ್ಷಕರುಗಳನ್ನು ಸನ್ಮಾನಿಸಲು ಪಾರಿತೋಷಕಗಳನ್ನು ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ಆಗುವ ವೆಚ್ಚ.	15000
4	ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಉತ್ತಮ ಫಲಿತಾಂಶ ನೀಡಿದ ಶಿಕ್ಷಕರು/ಉಪನ್ಯಾಸಕರುಗಳ ಗೌರವ ಧನ 20 ಮಂದಿಗೆ (ಶಿಶುವಿಹಾರದಿಂದ 2, ಪ್ರಾಥಮಿಕ ಶಾಲೆಯಿಂದ 2, ಪ್ರೌಢಶಾಲೆಯಿಂದ 8 ಮಂದಿಗೆ, ಪದವಿ ಪೂರ್ವ ಕಾಲೇಜಿನಿಂದ 6 ಮಂದಿಗೆ ಮತ್ತು ಪದವಿ ಕಾಲೇಜಿನಿಂದ 2 ಉತ್ತಮ ಶಿಕ್ಷಕರಿಗೆ/ಉಪನ್ಯಾಸಕರಿಗೆ 10,000/– ರೂಗಳನ್ನು ನಗದು ಬಹುಮಾನ ನೀಡಲು ಆಗುವ ವೆಚ್ಚದ ಮೊತ್ತ.	200000
5	ಪಾಲಿಕೆಯ ಪ್ರೌಢಶಾಲೆಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಒಬ್ಬ ವಿದ್ಯಾರ್ಥಿಗೆ ಪಾರಿತೋಷಕವನ್ನು ಖರೀದಿಸಲು 400 ರೂಗಳಾಗುತ್ತದೆ. ಒಟ್ಟು 73 ವಿದ್ಯಾರ್ಥಿಗಳನ್ನು ಸನ್ಮಾನಿಸಲು ಪಾರಿತೋಷಕಗಳನ್ನು ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ಆಗುವ ವೆಚ್ಚ.	29200

6	ಕಾರ್ಯಕ್ರಮಕ್ಕೆ ಆಗಮಿಸುವ ಶಿಕ್ಷಕರುಗಳು, ಉಪನ್ಯಾಸಕರುಗಳಿಗೆ ಪ್ಯಾಕೇಜ್ ಫುಡ್ (1000 ಮಂದಿಗೆ ಒಬ್ಬರಿಗೆ ಮಧ್ಯಾಹ್ನದ ಊಟಕ್ಕೆ (ಬೇಳೆ ಹೋಳಿಗೆ, ಪಾಯಸ, ಪೂರಿ, ವೆಜ್ ಕುರ್ಮ, ಫೀರೈಸ್, ಅನ್ನ, ರಸಂ, ಪಲ್ಯ, ಬಜ್ಜಿ, ಮಜ್ಜಿಗೆ, ಅಪ್ಪಳ, ಉಪ್ಪಿನ ಕಾಯಿ, ಮಿನರಲ್ ವಾಟರ್ ಸೇರಿ) 200/- ರೂಗಳಂತೆ ಒಟ್ಟು 1000*200=2,00,000/- ಹಾಗೂ ಬೆಳಗಿನ ಉಪಹಾರ (ಶಾವಿಗೆ ಬಾತ್, ಒಂದು ಸ್ಟೀಟ್, ಉದ್ದಿನ ವಡೆ, ಕಾಫಿ/ಟೀ) 200 ಮಂದಿಗೆ 100/- ರೂಗಳಂತೆ 100*200=20,000/- ಒಟ್ಟು 2,20,000/- ಎಲ್ಲಾ ತೆರಿಗೆಗಳು ಸೇರಿ) ಹಾಗೂ ಕಾರ್ಯಕ್ರಮಕ್ಕೆ ಆಗಮಿಸುವ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಹಾಗೂ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಪ್ಯಾಕೇಜ್ ಫುಡ್ 306 ಮಂದಿಗೆ ಮಧ್ಯಾಹ್ನದ ಊಟದ (ಬೇಳೆ ಹೋಳಿಗೆ, ಪಾಯಸ, ಪೂರಿ, ವೆಜ್ ಕುರ್ಮ, ಫೀರೈಸ್, ಅನ್ನ, ರಸಂ, ಪಲ್ಯ, ಬಜ್ಜಿ, ಮಜ್ಜಿಗೆ, ಅಪ್ಪಳ, ಉಪ್ಪಿನ ಕಾಯಿ, ಮಿನರಲ್ ವಾಟರ್ ಸೇರಿ) 200/- ರೂಗಳಂತೆ ಒಟ್ಟು 306*200=61,200/-ಎಲ್ಲಾ ತೆರಿಗೆಗಳು ಸೇರಿ) ವ್ಯವಸ್ಥೆಯನ್ನು ಒದಗಿಸಲು ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ಆಗುವ ವೆಚ್ಚ.	281200
7	ಪಿ.ಯು.ಸಿ. 227 ಮತ್ತು ಅಂತಿಮ ಪದವಿಯಲ್ಲಿ 06 ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಒಬ್ಬ ವಿದ್ಯಾರ್ಥಿಗೆ ಪ್ರಸ್ತುತ ಮಾರುಕಟ್ಟೆ ದರಗಳ ಪ್ರಕಾರ 400 ರೂಗಳಾಗಲಿದ್ದು ಒಟ್ಟು 233 ವಿದ್ಯಾರ್ಥಿಗಳನ್ನು ಸನ್ಮಾನಿಸಲು ಪಾರಿತೋಷಗಳನ್ನು ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ಆಗುವ ವೆಚ್ಚ.	93200
8	ಕಾರ್ಯಮಕ್ಕೆ ಆಗಮಿಸುವ 10 ಜನ ವಿಶೇಷ ಆಹ್ವಾನಿತರಿಗೆ, ಗಣ್ಯರಿಗೆ, ಮುಖ್ಯ ಅತಿಥಿಗಳಿಗೆ ಹೂವಿನ ಹಾರಗಳು, ಶಾಲುಗಳು, ಹಣ್ಣಿನ ಬುಟ್ಟಿಗಳು, ಹಾಗೂ ಡ್ರೈಫ್ರೂಟ್ಸ್ (ಗೋಡಂಬಿ, ದ್ರಾಕ್ಷಿ ಮತ್ತು ಪಿಸ್ತಾ), ಕಾಫಿ, ಟೀ ಮತ್ತು ಮಿನರಲ್ ವಾಟರ್ ವ್ಯವಸ್ಥೆಯನ್ನು ಒದಗಿಸಲು ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ಆಗುವ ವೆಚ್ಚ.	5000
9	ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ. ಹಾಗೂ ಅಂತಿಮ ಪದವಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಒಟ್ಟು 306 ವಿದ್ಯಾರ್ಥಿಗಳಿಗೆ ಹಾಗೂ ಉತ್ತಮ ಫಲಿತಾಂಶ ನೀಡಿದ 20 ಶಿಕ್ಷಕರು/ಉಪನ್ಯಾಸಕರುಗಳಿಗೆ ಒಂದು ಪ್ರಮಾಣ ಪತ್ರಕ್ಕೆ ಪ್ರಸ್ತುತ ಮಾರುಕಟ್ಟೆ ದರಗಳ ಪ್ರಕಾರ 45/- ರೂಗಳಂತೆ ಒಟ್ಟು 326 ಪ್ರಶಸ್ತಿ ಪ್ರಮಾಣ ಪತ್ರಗಳ ಮುದ್ರಣದ ವ್ಯವಸ್ಥೆಯನ್ನು ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ಆಗುವ ವೆಚ್ಚ.	14670
	ಒಟ್ಟು ಮೊತ್ತ ರೂ	1,07,08,270/-

ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ 1 ರಿಂದ 9 ರವರೆಗೆ ನಮೂದಿಸಿರುವಂತೆ, ಮಾನ್ಯ ಮುಖ್ಯ ಆಯುಕ್ತರು ರವರ ಅನುಮೋದನೆಯಂತೆ, 2024ನೇ ಸಾಲಿಗೆ ಪಾಲಿಕೆಯ ಶಿಕ್ಷಣ ಇಲಾಖೆಯ ವತಿಯಿಂದ "ಶಿಕ್ಷಕರ ದಿನಾಚರಣೆ" ಮತ್ತು "ಪ್ರತಿಭಾ ಪುರಸ್ಕಾರ" ಕಾರ್ಯಮವನ್ನು ಆಯೋಜಿಸಲು ವೆಚ್ಚವಾಗುವ ಒಟ್ಟು ಮೊತ್ತ ರೂ.1,07,08,270/- ಗಳಾಗಿದ್ದು, ಸದರಿ ಮೊತ್ತವನ್ನು ಪಾಲಿಕೆಯ ಶಿಕ್ಷಣ ವಿಭಾಗದ 2024-25ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 11 (ಸಾರ್ವಜನಿಕ ಶಿಕ್ಷಣ ಪಿಕೊಡ್ ಸಂಖ್ಯೆ: 11-221901 (ಪಿ0255) ಶಾಲಾ/ಕಾಲೇಜುಗಳ ಇತರೆ ಶೈಕ್ಷಣಿಕ ವೆಚ್ಚಗಳು)ರಲ್ಲಿ ರೂ.930.00ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಮೊತ್ತದಲ್ಲಿ ಮೇಲೆ ತಿಳಿಸಿರುವ ವೆಚ್ಚದಂತೆ ರೂ.1,07,08,270/-ಗಳನ್ನು ಭರಿಸಿಕೊಳ್ಳುವ ಸಂಬಂಧ ಅನುಮೋದನೆ ನೀಡಲು ಕೋರಿ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಶಿಕ್ಷಣ) ರವರ ಕಛೇರಿ ಸಂಖ್ಯೆ: ವಿ.ಆ.(ಶಿ)/ಪಿ.ಆರ್/1463/2024-25 ದಿನಾಂಕ:02-09-2024ರ ಟಿಪ್ಪಣಿ.

ವಿಷಯ ಸಂಖ್ಯೆ:166/2024-25

ತೀರ್ಮಾನ: ವಿಶೇಷ ಆಯುಕ್ತರು (ಶಿಕ್ಷಣ)ರವರು ಮಂಡಿಸಿರುವ ಸಂಖ್ಯೆ: ವಿಆ(ಶಿ)/ಪಿಆರ್/1463/2024-25 ದಿನಾಂಕ:02-09-2024ರ ಟಿಪ್ಪಣಿಯನ್ನು ಒಪ್ಪಿದೆ.

(ಉಮಾಶಂಕರ್.ಎಸ್.ಆರ್)
ಆಡಳಿತಗಾರರು

ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 05 – 07 –2024ರ ನಡವಳಿಗಳು

ವಿಷಯದ ಸಂಖ್ಯೆ: 104/2024-25

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2024–25ನೇ ಸಾಲಿನ ಪಾಲಿಕೆಯ ಆಯವ್ಯಯದ Budget code 10-221701 ಲೆಕ್ಕ ಶೀರ್ಷಿಕೆ (ಪಿ–0314) Avenue Planation Expenses ಅನುದಾನದ ಅಡಿಯಲ್ಲಿ ಆಡಳಿತಗಾರರ ಅಧಿಕಾರವನ್ನು ಚಲಾಯಿಸಿ ರೂ.18.50 ಕೋಟಿಗಳ ಅನುದಾನದ ವ್ಯಾಪ್ತಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ನೆಡುತೋಪುಗಳ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಮಾನ್ಯ ಆಡಳಿತಗಾರರ ಟಿಪ್ಪಣಿ ಸಂಖ್ಯೆ:–173/2023–24 ದಿ:31–01–2024ರಲ್ಲಿ ಸೂಚಿಸಿರುತ್ತಾರೆ

ಅದರಂತೆ 2024–25ನೇ ಸಾಲಿನ ಕರ್ನಾಟಕ ಅರಣ್ಯ ಇಲಾಖೆಯ ಎಸ್.ಎಸ್.ಆರ್ ದರಗಳನ್ವಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಮೇಲ್ಕಾಣಿಸಿದ ಕಾಮಗಾರಿಯ **ಇಂಡೆಂಟ್ ಸಂಖ್ಯೆ:BBMP/2024-25/OW/WORK_INDENT3245ರ ರೂ.136.79**ಲಕ್ಷಗಳ ಅಂದಾಜುಪಟ್ಟಿಗೆ ಮುಖ್ಯ ಅಭಿಯಂತರರು, ಕೆರೆಗಳು ರವರು ತಾಂತ್ರಿಕ ಮಂಜೂರಾತಿ ನೀಡಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಒಟ್ಟು 06 ಜನ ಬಿಡ್ಡುದಾರರುಗಳು ಆರ್ಥಿಕ ಬಿಡ್‌ನಲ್ಲಿ ಅರ್ಹರಿದ್ದು ಬಿಡ್‌ದಾರರಾದ ಶ್ರೀ ವೆಂಕಟೇಶಪ್ಪ.ಕೆ ರವರು ಅತಿ ಕಡಿಮೆ ದರವನ್ನು ನಮೂದಿಸಿ ಎಲ್–1 ಗುತ್ತಿಗೆದಾರರಾಗಿರುತ್ತಾರೆ ಈ ಟೆಂಡರ್ ಅನ್ನು ಅನುಮೋದನೆಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರು ಶಿಫಾರಸ್ಸು ಮಾಡಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.**1,36,78,655/-**ಗಳಾಗಿದ್ದು, ಎಲ್–1 ಬಿಡ್‌ದಾರರಾದ **ಶ್ರೀ ವೆಂಕಟೇಶಪ್ಪ.ಕೆ** ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತ **ರೂ.98,48,632/-**ಗಳಾಗಿದ್ದು, ಅಂದಾಜು ಪಟ್ಟಿಗೆ ವಿರುದ್ಧವಾಗಿ ಶೇಕಡ 28.00% **ರಷ್ಟು ಕಡಿಮೆ** ದರಗಳನ್ನು ನಮೂದಿಸಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು ರೂ.**1,36,78,655/-**ಗಳಾಗಿದ್ದು ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿ ಆದೇಶದ ಸಂಖ್ಯೆ: ಬಿ12(1)/ಪಿ.ಆರ್/394/2023–24, ದಿನಾಂಕ:06–12–2023 ರ ರೀತ್ಯಾ ಸದರಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿ/ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ "Raising and maintenance of monsoon plantation in BBMP Yelahanka zone Byatarayanapura Assembly constitueuncy during 2024-25 and its maintenance during 2025-26 & 2026-27, 6500 Plants" ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿ ಆರ್ಥಿಕ ಬಿಡ್‌ನಲ್ಲಿ ಅರ್ಹರಾಗಿರುವ ಎಲ್-1 ಬಿಡ್‌ದಾರರಾದ **ಶ್ರೀ ವೆಂಕಟೇಶಪ್ಪ.ಕೆ** ರವರು ಅಂದಾಜುಪಟ್ಟಿಗೆ ವಿರುದ್ಧವಾಗಿ ನಮೂದಿಸಿರುವ ಬಿಡ್ ಮೊತ್ತ **ರೂ.98,48,632/-(ರೂ.ತೊಂಬತ್ತೆಂಟು ಲಕ್ಷದ ನಲವತ್ತೆಂಟು ಸಾವಿರದ ಆರೂನೂರ ಮುವತ್ತೆರಡು ಮಾತ್ರ)ಗಳಾಗಿದ್ದು ಈ ಮೊತ್ತವನ್ನು ಟೆಂಡರ್ ಗಿಟ್ಟ** ಮೊತ್ತಕ್ಕೆ ಹೋಲಿಸಿದಾಗ **ಶೇಕಡ 28.00ರಷ್ಟು ಕಡಿಮೆಯಾಗಿದ್ದು** ಟೆಂಡರ್ ಅನುಮೋದನೆ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಅರಣ್ಯ ಪರಿಸರ ಹವಾಮಾನ ವೈಪರಿತ್ಯ ನಿರ್ವಹಣೆ) ರವರ ಕಛೇರಿ ಸಂಖ್ಯೆ:SC/FECC/PR/1091/24-25 Dt.26.7.2024ರ ಟಿಪ್ಪಣಿ.

ವಿಷಯ ಸಂಖ್ಯೆ:104/2024-25

ತೀರ್ಮಾನ: ವಿಶೇಷ ಆಯುಕ್ತರು (ಅರಣ್ಯ ಪರಿಸರ ಹವಾಮಾನ ವೈಪರಿತ್ಯ ನಿರ್ವಹಣೆ) ರವರು ಮಂಡಿಸಿರುವ ಸಂಖ್ಯೆ:SC/FECC/PR/1091/24-25 Dt.26.7.2024ರ ಟಿಪ್ಪಣಿಯನ್ನು ಒಪ್ಪಿದೆ.

(ಉಮಾಶಂಕರ್.ಎಸ್.ಆರ್)
ಆಡಳಿತಗಾರರು

ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 05 – 09 –2024ರ ನಡವಳಿಗಳು

ವಿಷಯದ ಸಂಖ್ಯೆ:112/2024-25

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2024–25ನೇ ಸಾಲಿನ ಪಾಲಿಕೆಯ ಆಯವ್ಯಯದ Budget code 10-221701 ಲೆಕ್ಕ ಶೀರ್ಷಿಕೆ (ಪಿ–0314) Avenue Planation Expenses ಅನುದಾನದ ಅಡಿಯಲ್ಲಿ ಆಡಳಿತಗಾರರ ಅಧಿಕಾರವನ್ನು ಚಲಾಯಿಸಿ ರೂ.18.50ಕೋಟಿಗಳ ಅನುದಾನದ ವ್ಯಾಪ್ತಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ನೆಡುತೋಪುಗಳ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಮಾನ್ಯ ಆಡಳಿತಗಾರರ ಟಿಪ್ಪಣಿ ಸಂಖ್ಯೆ:173/2023–24 ದಿನಾಂಕ:31–01–2024ರಲ್ಲಿ ಸೂಚಿಸಿರುತ್ತಾರೆ

ಅದರಂತೆ 2024–25ನೇ ಸಾಲಿನ ಕರ್ನಾಟಕ ಅರಣ್ಯ ಇಲಾಖೆಯ ಎಸ್.ಎಸ್.ಆರ್ ದರಗಳನ್ವಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಮೇಲ್ಕಾಣಿಸಿದ ಕಾಮಗಾರಿಯ **ಇಂಡೆಂಟ್ ಸಂಖ್ಯೆ:BBMP/2024-25/OW/WORK_INDENT3247ರ** ರೂ.126.26ಲಕ್ಷಗಳ ಅಂದಾಜುಪಟ್ಟಿಗೆ ಮುಖ್ಯ ಅಭಿಯಂತರರು, ಕೆರೆಗಳು ರವರು ತಾಂತ್ರಿಕ ಮಂಜೂರಾತಿ ನೀಡಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಒಟ್ಟು 02 ಜನ ಬಿಡ್ಡುದಾರರುಗಳು ಆರ್ಥಿಕ ಬಿಡ್‌ನಲ್ಲಿ ಅರ್ಹರಿದ್ದು ಬಿಡ್‌ದಾರರಾದ **ಶ್ರೀ ಸಂದೀಪ್ ಟಿ ಶೇರೀಕರ್** ರವರು ಅತಿ ಕಡಿಮೆ ದರವನ್ನು ನಮೂದಿಸಿ ಎಲ್–1 ಗುತ್ತಿಗೆದಾರರಾಗಿರುತ್ತಾರೆ ಈ ಟೆಂಡರ್ ಅನ್ನು ಅನುಮೋದನೆಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರು ಶಿಫಾರಸ್ಸು ಮಾಡಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.**1,26,25,929/-**ಗಳಾಗಿದ್ದು, ಎಲ್–1 ಬಿಡ್‌ದಾರರಾದ **ಶ್ರೀ ಸಂದೀಪ್ ಟಿ ಶೇರೀಕರ್** ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತ **ರೂ.92,16,928/-**ಗಳಾಗಿದ್ದು, ಅಂದಾಜು ಪಟ್ಟಿಗೆ ವಿರುದ್ಧವಾಗಿ ಶೇಕಡ 27.00**ರಷ್ಟು ಕಡಿಮೆ** ದರಗಳನ್ನು ನಮೂದಿಸಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು ರೂ.**1,26,25,929/-**ಗಳಾಗಿದ್ದು ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿ ಆದೇಶದ ಸಂಖ್ಯೆ:ಬಿ12(1)/ಪಿ.ಆರ್/394/2023–24, ದಿನಾಂಕ:06–12–2023ರ ರೀತ್ಯಾ ಸದರಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿ/ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ "Raising and maintenance of monsoon plantation in BBMP Mahadevapura zone Mahadevapura Assembly Constitueuncy during 2024-25 and its maintenance during 2025-26 & 2026-27, 6000 Plants" ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿ ಆರ್ಥಿಕ ಬಿಡ್‌ನಲ್ಲಿ ಅರ್ಹರಾಗಿರುವ ಎಲ್-1 ಬಿಡ್‌ದಾರರಾದ ಶ್ರೀ ಸಂದೀಪ್ ಟಿ ಶೇರೀಕರ್‌ರವರು ಅಂದಾಜುಪಟ್ಟಿಗೆ ವಿರುದ್ಧವಾಗಿ ನಮೂದಿಸಿರುವ ಬಿಡ್ ಮೊತ್ತ **ರೂ.92,16,928/-(ರೂ. ತೊಂಬತ್ತೆರಡು ಲಕ್ಷದ ಹದಿನಾರು ಸಾವಿರದ ಒಂಬೈನೂರ ಇಪ್ಪತ್ತೆಂಟು ಮಾತ್ರ)ಗಳಾಗಿದ್ದು ಈ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 27.00ರಷ್ಟು ಕಡಿಮೆಯಾಗಿದ್ದು** ಟೆಂಡರ್ ಅನುಮೋದನೆ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಅರಣ್ಯ ಪರಿಸರ ಹವಾಮಾನ ವೈಪರಿತ್ಯ ನಿರ್ವಹಣೆ) ರವರ ಕಛೇರಿ ಸಂಖ್ಯೆ:SC/FECC/PR/1089/24-25 Dt.26.7.2024ರ ಟಿಪ್ಪಣಿ.

ವಿಷಯ ಸಂಖ್ಯೆ:112/2024-25

ತೀರ್ಮಾನ: ವಿಶೇಷ ಆಯುಕ್ತರು (ಅರಣ್ಯ ಪರಿಸರ ಹವಾಮಾನ ವೈಪರಿತ್ಯ ನಿರ್ವಹಣೆ) ರವರು ಮಂಡಿಸಿರುವ ಸಂಖ್ಯೆ:SC/FECC/PR/1089/24-25 Dt.26.7.2024ರ ಟಿಪ್ಪಣಿಯನ್ನು ಒಪ್ಪಿದೆ.

(ಉಮಾಶಂಕರ್.ಎಸ್.ಆರ್)
ಆಡಳಿತಗಾರರು

ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 05 - 09 -2024ರ ನಡವಳಿಗಳು

ವಿಷಯದ ಸಂಖ್ಯೆ: 153/2024-25

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತಹ ತೋಟಗಾರಿಕೆ ಉದ್ಯಾನವನಗಳ, ವಿಭಜಕಗಳು, ವೃತ್ತಗಳು ಮತ್ತು ಐಲ್ಯಾಂಡ್‌ಗಳನ್ನು **"ನಮ್ಮ ಬೆಂಗಳೂರು – ನನ್ನ ಕೊಡುಗೆ"** ಅಡಿಯಲ್ಲಿ ನಿರ್ವಹಣೆ/ ಅಭಿವೃದ್ಧಿ ಮಾಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಂತೆ ದತ್ತು ನೀಡಬಹುದಾಗಿದೆ.

ಷರತ್ತು ಮತ್ತು ನಿಬಂಧನೆಗಳು:-

01. ದತ್ತು ಅನುಮತಿಯು ಸ್ಥಳದ ಸ್ವಾಮಿತ್ವ, ಭೋಗ್ಯ ಅಥವಾ ಮತ್ತಾವುದೇ ಅಧಿಕಾರಕ್ಕೆ ಒಳಪಡುವುದಿಲ್ಲ.

02. ಈ ಅನುಮತಿಯನ್ನು ಹಸ್ತಾಂತರಿಸಬಾರದು.

03. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ಸೂಚನೆ ನೀಡದೆ ಈ ದತ್ತನ್ನು ರದ್ದು ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಆಸ್ತಿಯ ಮೇಲೆ ಸಾರ್ವಕಾಲಿಕ ಅಧಿಕಾರವು ಬೃಹತ್ ಮಹಾನಗರ ಪಾಲಿಕೆಯದೇ ಆಗಿರುತ್ತದೆ. ಸಂಸ್ಥೆಯು ಕೈಗೊಳ್ಳುವ ಅಭಿವೃದ್ಧಿ ಕೆಲಸಗಳನ್ನು ಪರಿಶೀಲಿಸುವ ಹಾಗೂ ನಿಯಂತ್ರಿಸುವ ಅಧಿಕಾರವು ಪಾಲಿಕೆಯದಾಗಿರುತ್ತದೆ.

04. ಪ್ರಯೋಜಕರ ಪ್ರದರ್ಶನ ಮತ್ತು ಲೋಗೋ/ನಾಮಫಲಕವು ತೋಟಗಾರಿಕೆ ಅಧಿಕಾರಿಗಳು ಸೂಚಿಸುವ ಅಳತೆಯಂತೆ ಅಳವಡಿಸತಕ್ಕದ್ದು.

05. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರಾಯೋಜಕರು ಕೆಲಸ ಕಾರ್ಯಗಳು ತೃಪ್ತಿಕರವಾಗಿ ಕಾಣದಿದ್ದಲ್ಲಿ ಅಥವಾ ಪ್ರಾಯೋಜಕ ಸಂಸ್ಥೆಯು ನಿಬಂಧನೆಗಳನ್ನು ಮೀರಿದ್ದಲ್ಲಿ ಈ ಅನುಮತಿಯನ್ನು ಯಾವುದೇ ಕಾರಣ ನೀಡದೆ ಹಿಂದಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಪಾಲಿಕೆ ಹೊಂದಿರುತ್ತಾರೆ.

06. ನಿರ್ವಹಿಸಬೇಕಾಗಿರುವ ಕೆಲಸಗಳ ಬಗ್ಗೆ ಸೂಕ್ತ ರೂಪುರೇಷೆಗಳನ್ನು ಸಿದ್ಧಪಡಿಸಿ ಅಭಿವೃದ್ಧಿಗೊಳಿಸಬೇಕಾಗಿರುವ ಪಾಲಿಕೆಯ ಸಕ್ಷಮ ತೋಟಗಾರಿಕೆ ಅಧಿಕಾರಿಗಳು ನಿರ್ಧರಿಸಿದಂತೆ ನಿರ್ವಹಿಸಬೇಕು.

07. ಪ್ರಾಯೋಜನಾ ಸಂಸ್ಥೆಯು ಬೃಹತ್ ಮಹಾನಗರ ಪಾಲಿಕೆಯ ನಾಮಫಲಕ / ಲಾಂಛನವನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಸಂಸ್ಥೆಯ ಲೋಗೋ ಜೊತೆಯಲ್ಲಿ ಪ್ರದರ್ಶಿಸತಕ್ಕದ್ದು.

08. ಅನುಮತಿ ಪಡೆದ ಸ್ಥಳದಲ್ಲಿ ಅವಶ್ಯ ಭದ್ರತಾ ಸಿಬ್ಬಂದಿ ದಿನದ 24 ಗಂಟೆ ನಿಯೋಜಿಸಿಕೊಂಡು ಭದ್ರತೆ ಒದಗಿಸಬೇಕು.

09. ನಿರ್ವಹಣೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ರೀತಿಯ ಕುಂದು ಕೊರತೆಗಳ ದೂರುಗಳು ಬಂದಲ್ಲಿ ಅಂತಹ ದೂರುಗಳನ್ನು ತಕ್ಷಣ ಪರಿಹರಿಸಬೇಕು.

10. ಅಭಿವೃದ್ಧಿ ಮತ್ತು ನಿರ್ವಹಣಾ ಅವಧಿಯನ್ನು ಪ್ರಥಮ ಹಂತದಲ್ಲಿ 11 ತಿಂಗಳಿಗೆ ಸೀಮಿತಗೊಳಿಸಿದೆ. ದತ್ತು ಅವಧಿಯನ್ನು ಮತ್ತೊಂದು ಅವಧಿಗೆ ವಿಸ್ತರಿಸಲು ಕೋರಿದ್ದಲ್ಲಿ, ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು.

11. ದತ್ತು ಪಡೆದಿರುವ ಸಂಸ್ಥೆ ಹಾಗೂ ಪಾಲಿಕೆ ನಡುವೆ ವಿವಾದ ಉಂಟಾದ್ದಲ್ಲಿ, ಪ್ರಕರಣವನ್ನು ನ್ಯಾಯಾಲಯಕ್ಕೆ ಕೊಂಡೊಯ್ಯಲು ಅವಕಾಶವಿರುವುದಿಲ್ಲ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ತೀರ್ಮಾನವೇ ಅಂತಿಮವಾಗಿರುತ್ತದೆ.

12. ತೋಟಗಾರಿಕೆ ಅಧಿಕಾರಿಗಳು ನೀಡುವ Landscape Design ನಂತೆ ಕೆಲಸ ನಿರ್ವಹಿಸಬೇಕು ಮತ್ತು ಬಡಬಂಡಿಕೆ ಮಾಡಿಕೊಳ್ಳಬೇಕು.

13. ಈ ಅನುಮತಿಯನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಆ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಬೇಕು.

14. ಈ ಮೇಲಿನ ಯಾವುದೇ ನಿಬಂಧನೆಗಳನ್ನು ಮೀರಿದ್ದಲ್ಲಿ ನೀಡಲಾಗಿರುವ ಅನುಮತಿಯನ್ನು ಕೂಡಲೇ ಯಾವುದೇ ಕಾರಣ ನೀಡದೇ ಮತ್ತು ನೋಟಿಸ್ ನೀಡದೇ ರದ್ದು ಮಾಡಲಾಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತಹ ತೋಟಗಾರಿಕೆ ಉದ್ಯಾನವನಗಳು, ವಿಭಜಕಗಳು, ವೃತ್ತಗಳು ಮತ್ತು ಐಲ್ಯಾಂಡ್‌ಗಳನ್ನು **"ನಮ್ಮ ಬೆಂಗಳೂರು – ನನ್ನ ಕೊಡುಗೆ"** ಅಡಿಯಲ್ಲಿ ನಿರ್ವಹಣೆ/ಅಭಿವೃದ್ಧಿ ಮಾಡಲು ಈ ಕೆಳಕಂಡ ಸಂಸ್ಥೆಯು ಮುಂದೆ ಬಂದಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಸಂಸ್ಥೆಯ ವಿವರ	ಉದ್ಯಾನವನಗಳು/ವಿಭಜಕಗಳು/ವೃತ್ತಗಳು ಮತ್ತು ಐಲ್ಯಾಂಡ್‌ಗಳ ವಿವರ
1	**Rotary Bangalore Midtown**	**Park in MCHS Layout, Jakkur as mini urban forest**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ವಿವಿಧ ಉದ್ಯಾನವನಗಳು ವಿಭಜಕಗಳು, ವೃತ್ತಗಳು ಮತ್ತು ಐಲ್ಯಾಂಡ್‌ಗಳನ್ನು ನಿರ್ವಹಣೆ ಮಾಡಲು **"ನಮ್ಮ ಬೆಂಗಳೂರು – ನನ್ನಕೊಡುಗೆ"** ಅಡಿಯಲ್ಲಿ ಮೇಲ್ಕಂಡ Rotary Bangalore Midtown ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಎಫ್.ಇ.ಸಿ.ಸಿ.ಎಂ) ರವರ ಕಛೇರಿ ಸಂಖ್ಯೆ:ಉ.ನಿ(ತೋ)/ಪಿ.ಆರ್/330/2024–25 ದಿನಾಂಕ:23–08–2024ರ ಟಿಪ್ಪಣಿ.

ವಿಷಯ ಸಂಖ್ಯೆ:153/2024–25

ತೀರ್ಮಾನ: ವಿಶೇಷ ಆಯುಕ್ತರು (ಎಫ್.ಇ.ಸಿ.ಸಿ.ಎಂ) ರವರು ಮಂಡಿಸಿರುವ ಸಂಖ್ಯೆ:ಉ.ನಿ(ತೋ)/ಪಿ.ಆರ್/330/2024–25 ದಿನಾಂಕ:23–08–2024ರ ಟಿಪ್ಪಣಿಯನ್ನು ಒಪ್ಪಿದೆ.

(ಉಮಾಶಂಕರ್.ಎಸ್.ಆರ್)
ಆಡಳಿತಗಾರರು

ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 06 - 09 - 2024ರ ನಡವಳಿಗಳು

ವಿಷಯ ಸಂಖ್ಯೆ: 36/2024-25

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2024-25ನೇ ಸಾಲಿಗೆ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆಸೀನರಾಗಲು ಅವಶ್ಯಕವಾಗಿರುವ ಪೀಠೋಪಕರಣ (Desk), ವಿಜ್ಞಾನ ಪ್ರಯೋಗಾಲಯ, ಕುರ್ಚಿ, ಅಲಮೇರಾ, ಟೇಬಲ್‌ಗಳನ್ನು ಖರೀದಿಸಿ ವಿತರಿಸಬೇಕಾಗಿದ್ದು, ಮಾನ್ಯ ಮುಖ್ಯ ಆಯುಕ್ತರವರ ಅನುಮೋದನೆಯ ದಿನಾಂಕ:30-05-2024 ಇ-ಆಫೀಸ್ ಸಂಖ್ಯೆ:73711ರಂತೆ ಅವಶ್ಯವಿರುವ ಪರಿಕರಗಳನ್ನು ಪಾಲಿಕೆಯ ವತಿಯಿಂದ ಖರೀದಿಸಿ ಉಚಿತವಾಗಿ ವಿತರಿಸಲು ತಗಲುವ ದರವನ್ನು ಹಿಂದಿನ ಸಾಲಿನಲ್ಲಿ ಆಹ್ವಾನಿಸಿದ್ದ ಟೆಂಡರ್ ದರಗಳನ್ನು ಅನ್ವಯಿಸಿಕೊಂಡು ಅಂದಾಜು ವೆಚ್ಚವನ್ನು ಸಿದ್ಧಪಡಿಸಿದೆ.

ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಆಸೀನರಾಗಲು ಪೀಠೋಪಕರಣಗಳನ್ನು ಖರಿದೀಸುವ ಬಗ್ಗೆ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಡೆಸ್ಕ್‌ಗಳನ್ನು ಪಡೆಯಲು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರಿನಲ್ಲಿ ಎಲ್-1 ಬಿಡ್ಡುದಾರರಾಗಿ ಆಯ್ಕೆಯಾಗಿದ್ದ ಸಂಸ್ಥೆಯವರು ರೂ.11,660/-ಗಳನ್ನು ಸಲ್ಲಿಸಿರುತ್ತಾರೆ. ಸದರಿ ದರಗಳನ್ನು ಅಳವಡಿಸಿಕೊಂಡು ಟೆಂಡರ್ ಆಹ್ವಾನಿಸಿದಲ್ಲಿ ತಗಲುವ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.

ಪ್ರಾಥಮಿಕ ಶಾಲೆಗಳಿಗೆ ಪೀಠೋಪಕರಣ ಖರೀದಿಗೆ ತಗಲುವ ವೆಚ್ಚದ ವಿವರ.

ಕ್ರ. ಸಂ	ಪ್ರಾಥಮಿಕ ಶಾಲೆಯ ಹೆಸರು	ಅವಶ್ಯವಿರುವ ಪೀಠೋಪಕರಣಗಳು (ಡೆಸ್ಕ್) ಸಂಖ್ಯೆ ಹಾಗೂ ಒಂದಕ್ಕೆ ತಗಲುವ ಅಂದಾಜು ಮೊತ್ತ	ಒಟ್ಟು ಮೊತ್ತ
1	ದಿನ್ನೂರು	50 x 11660	5,83,000
2	ಟಾಸ್ಕ್ ರ್ ಟೌನ್	50 x 11660	5,83,000
	ಒಟ್ಟು=	100 x 11660	11,66,000

ಡೆಸ್ಕ್ ಗಳ ಬೇಡಿಕೆ ಪತ್ರವನ್ನು ಸಲ್ಲಿಸಿರುವ ಪ್ರೌಢಶಾಲೆಗಳ ವಿವರ.

ಕ್ರ. ಸಂ	ಪ್ರೌಢಶಾಲೆಯ ಹೆಸರು	ಅವಶ್ಯವಿರುವ ಪೀಠೋಪಕರಣಗಳು (ಡೆಸ್ಕ್) ಸಂಖ್ಯೆ ಹಾಗೂ ಒಂದಕ್ಕೆ ತಗಲುವ ಅಂದಾಜು ಮೊತ್ತ	ಒಟ್ಟು ಮೊತ್ತ
1	ಭೈರವೇಶ್ವರ ನಗರ	30 x 11660	3,49,800
2	ಕ್ಲೀವ್ ಲ್ಯಾಂಡ್ ಟೌನ್	100 x 11660	11,66,000
3	ಲಗ್ಗೆರೆ	30 x 11660	3,49,800
4	ಗಂಗಾನಗರ	100 x 11660	11,66,000
5	ಶ್ರೀರಾಮಪುರ	20 x 11660	2,33,200
6	ಕೋದಂಡರಾಮಪುರ	15 x 11660	1,74,900
7	ಚಾಮರಾಜಪೇಟೆ	10 x 11660	1,16,600
8	ಜೋಗುಪಾಳ್ಯ	15 x 11660	1,74,900
9	ಕಾಟನ್ ಪೇಟೆ	30 x 11660	3,49,800
10	ಜಯಮಹಲ್	10 x 11660	1,16,600
11	ಭೈರಸಂದ್ರ	10 x 11660	1,16,600
	ಒಟ್ಟು=	**370 x 11660**	**43,14,200/-**

ಡೆಸ್ಕ್ ಗಳ ಬೇಡಿಕೆ ಪತ್ರವನ್ನು ಸಲ್ಲಿಸಿರುವ ಪದವಿ ಪೂರ್ವ ಕಾಲೇಜಿನ ವಿವರ.

ಕ್ರ. ಸಂ	ಪದವಿ ಪೂರ್ವ ಕಾಲೇಜಿನ ಹೆಸರು	ಅವಶ್ಯವಿರುವ ಪೀಠೋಪಕರಣಗಳು (ಡೆಸ್ಕ್) ಸಂಖ್ಯೆ ಹಾಗೂ ಒಂದಕ್ಕೆ ತಗಲುವ ಅಂದಾಜು ಮೊತ್ತ	ಒಟ್ಟು ಮೊತ್ತ
1	ಚಾಮರಾಜಪೇಟೆ	10 x 11660	1,16,600
2	ಶ್ರೀರಾಮಪುರ	100 x 11660	11,66,000
3	ಪಿಳ್ಳಣ್ಣ ಗಾರ್ಡನ್	100 x 11660	11,66,000
4	ಉತ್ತರಹಳ್ಳಿ	30 x 11660	3,49,800
5	ಕಸ್ತೂರಿ ಬಾ ನಗರ	25 x 11660	2,91,500
6	ಧಣಿಸಂದ್ರ	20 x 11660	2,33,200
7	ಶಕ್ತಿಗಣಪತಿನಗರ	50 x 11660	5,83,000
8	ಕಾವೇರಿಪುರ	45 x 11660	5,24,700
	ಒಟ್ಟು=	**380 x 11660**	**44,30,800/-**

ಡೆಸ್ಕ್‌ಗಳ ಬೇಡಿಕೆ ಪತ್ರವನ್ನು ಸಲ್ಲಿಸಿರುವ ಪದವಿ ಕಾಲೇಜಿನ ವಿವರ

ಕ್ರ. ಸಂ	ಪದವಿ ಕಾಲೇಜಿನ ಹೆಸರು	ಅವಶ್ಯವಿರುವ ಪೀಠೋಪಕರಣಗಳು (ಡೆಸ್ಕ್) ಸಂಖ್ಯೆ ಹಾಗೂ ಒಂದಕ್ಕೆ ತಗಲುವ ಅಂದಾಜು ಮೊತ್ತ	ಒಟ್ಟು ಮೊತ್ತ
1	ಕ್ಲೀವ್ ಲ್ಯಾಂಡ್ ಟೌನ್	40 x 11660	4,66,400/-
	ಒಟ್ಟು=	40 x 11660	**4,66,400/-**

ಒಟ್ಟು ಶಾಲಾ/ಕಾಲೇಜುಗಳ ಡೆಸ್ಕ್‌ಗಳ ಖರೀದಿಗೆ ತಗಲುವ ಅಂದಾಜು ಮೊತ್ತದ ವಿವರ

ಕ್ರ. ಸಂ	ಶಾಲಾ/ಕಾಲೇಜಿನ ವಿವರ	ಅವಶ್ಯವಿರುವ ಪೀಠೋಪಕರಣಗಳು (ಡೆಸ್ಕ್) ಸಂಖ್ಯೆ ಹಾಗೂ ಒಂದಕ್ಕೆ ತಗಲುವ ಅಂದಾಜು ಮೊತ್ತ	ಒಟ್ಟು ಮೊತ್ತ
1	ಪ್ರಾಥಮಿಕ ಶಾಲೆ	100 x 11660	11,66,000/-
2	ಪ್ರೌಢಶಾಲೆ	370 x 11660	43,14,200/-
3	ಪದವಿ ಪೂರ್ವ ಕಾಲೇಜು	380 x 11660	44,30,800/-
4	ಪದವಿ ಕಾಲೇಜು	40 x 11660	4,66,400/-
	ಒಟ್ಟು=	**890 x 11660**	**1,03,77,400/-**

2022-23ನೇ ಸಾಲಿನಲ್ಲಿ ಶೈಕ್ಷಣಿಕ ಸಾಲಿನಲ್ಲಿ ಸಲ್ಲಿಸಿದ್ದ ದರಗಳನ್ನು ಅಳವಡಿಸಿಕೊಂಡು ರೂ.1,03,77,400/-ಗಳಿಗೆ ಕ್ರಿಯಾ ಯೋಜನೆ ಪಟ್ಟಿಯನ್ನು ಸಿದ್ಧಪಡಿಸಿದೆ.

ದಿನಾಂಕ:29-05-2024 ರಂದು ನಡೆದ ಸಭೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಶಿಕ್ಷಣ) ರವರ ಮೌಖಿಕ ಆದೇಶದಂತೆ 05 ಪದವಿ ಪೂರ್ವ ಕಾಲೇಜುಗಳಿಗೆ ವಿಜ್ಞಾನ ಪ್ರಯೋಗಾಲಯದ ವಸ್ತುಗಳಿಗೆ ಈ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

05 ಪದವಿ ಪೂರ್ವ ಕಾಲೇಜುಗಳಿಗೆ ವಿಜ್ಞಾನ ಪ್ರಯೋಗಾಲಯದ ಉನ್ನತಿಕರಣಗೊಳಿಸಲು ಕ್ರಿಯಾ ಯೋಜನೆ ವಿವರ

ಕ್ರ. ಸಂ	ಕಾಲೇಜುಗಳ ಹೆಸರು	ಪೀಠೋಪಕರಣ ಖರೀದಿಸಲು ನಿಗಧಿಪಡಿಸಿದ ಅಂದಾಜು ಮೊತ್ತ
1	ಶ್ರೀರಾಂಪುರ ಪದವಿ ಪೂರ್ವ ಕಾಲೇಜು	10,00,000/-
2	ಕ್ಲೀವ್ ಲ್ಯಾಂಡ ಟೌನ್ ಪದವಿ ಪೂರ್ವ ಕಾಲೇಜು	10,00,000/-

3	ಡಿಸ್ಪೆನ್ಸರಿ ರಸ್ತೆ ಪದವಿ ಪೂರ್ವ ಕಾಲೇಜು	10,00,000/-
4	ಮಾಗಡಿ ರಸ್ತೆ ಪದವಿ ಪೂರ್ವ ಕಾಲೇಜು	10,00,000/-
5	ಕಸ್ತೂರಿಬಾ ನಗರ ಪದವಿ ಪೂರ್ವ ಕಾಲೇಜು	10,00,000/-
	ಒಟ್ಟು	**50,00,000/-**

ಮೇಲ್ಕಂಡ ಕ್ರಿಯಾ ಯೋಜನೆ ಪಟ್ಟಿಯಲ್ಲಿ ವಿವರಸಿರುವಂತೆ ಪಾಲಿಕೆಯ 05 ಪದವಿ ಪೂರ್ವ ಕಾಲೇಜುಗಳಿಗೆ ವಿಜ್ಞಾನ ಪ್ರಯೋಗಾಲಯದ ಪೀಠೋಪಕರಣ ಖರೀದಿಸಲು ಅಂದಾಜು ರೂ.50,00,000/-ಗಳಾಗಬಹುದಾಗಿದ್ದು, ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ.

ಹಾಗೂ

ಮುಂದುವರೆದು ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಅಗತ್ಯ ಮಾಹಿತಿ ಹಾಗೂ ಈ ಕಛೇರಿಯಿಂದ ಸೂಚಿಸುವ ಕಾರ್ಯಗಳ ಮಾಹಿತಿಯನ್ನು ಕ್ರೂಢೀಕರಿಸಲು ಮತ್ತು ಶಿಕ್ಷಕರುಗಳು ಆಸೀನರಾಗಲು ಕುರ್ಚಿ, ಅಲಮೇರ ಆಫೀಸ್ ಟೇಬಲ್ ಗಳನ್ನು ಖರೀದಿಸಿ ವಿತರಿಸಲು ಮನವಿಯನ್ನು ಸಲ್ಲಿಸಿದ್ದು ವಿವರ ಈ ಕೆಳಕಂಡಂತಿರುತ್ತದೆ.

ಶಿಶುವಿಹಾರ ಶಾಲೆಗಳ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ವಿವರ.

ಕ್ರ. ಸಂ	ಶಿಶುವಿಹಾರ ಶಾಲೆಗಳ ಹೆಸರು	ಅಲಮೇರ (ಬೀರು)	ಆಫೀಸ್ ಟೇಬಲ್	ಕುರ್ಚಿ
1	ನೀಲಸಂದ್ರ, ಶಿಶುವಿಹಾರ	1	0	0
2	ಸೆಂಟ್ರಲ್ ಬಜಾರ, ಶಿಶುವಿಹಾರ	1	0	2
3	ಗಾಯತ್ರಿದೇವಿ ಪಾರ್ಕ್, ಶಿಶುವಿಹಾರ	1	0	0
4	ಜಯನಗರ, ಶಿಶುವಿಹಾರ	1	0	0
5	ಸುಬ್ರಮಣ್ಯನಗರ, ಶಿಶುವಿಹಾರ	1	0	0
6	ಲಕ್ಕಸಂದ್ರ, ಶಿಶುವಿಹಾರ	2	1	0
7	ಅಶೋಕಪುರ, ಶಿಶುವಿಹಾರ	2	2	4
8	ರಾಮಮೋಹನಪುರ, ಶಿಶುವಿಹಾರ	1	1	3
9	ಗೋಪಾಲಸ್ವಾಮಿ ಅಯ್ಯರ್ ಕಾಲೋನಿ, ಶಿಶುವಿಹಾರ	0	0	0

10	ಕೆ.ಜಿ.ನಗರ , ಶಿಶುವಿಹಾರ	0	0	0
11	ಪಾದರಾಯನಪುರ, ಶಿಶುವಿಹಾರ	2	2	2
12	ಆಜಾದ್ ನಗರ, ಶಿಶುವಿಹಾರ	0	0	0
13	ಶ್ರೀರಾಮಪುರ, ಶಿಶುವಿಹಾರ	0	1	0
14	ಮಾರೇನಹಳ್ಳಿ, ಶಿಶುವಿಹಾರ	0	0	2
15	ಹನುಮಂತನಗರ, ಶಿಶುವಿಹಾರ	2	1	2
16	ಚಿನಯ್ಯನಪಾಳ್ಯ, ಶಿಶುವಿಹಾರ	0	0	0
17	ಬನ್ನಪ್ಪಪಾರ್ಕ್, ಶಿಶುವಿಹಾರ	1	0	2
18	ಸ್ವಿಮಿಂಗ್ ಪೂಲ್ ಎಕ್ಸಟೆಷನ್, ಶಿಶುವಿಹಾರ	0	0	0
19	ಮಾರುತಿ ಮಂದಿರ, ಶಿಶುವಿಹಾರ	3	2	8
20	ಬ್ರಾಡ್ವೇ, ಶಿಶುವಿಹಾರ	0	0	0
21	ಜಲಕಂಠೇಶ್ವರನಗರ, ಶಿಶುವಿಹಾರ	0	1	6
22	ಭೈರಸಂದ್ರ, ಶಿಶುವಿಹಾರ	1	1	2
	ಒಟ್ಟು	**19**	**12**	**33**

<u>ಪ್ರಾಥಮಿಕ ಶಾಲೆಯ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆಯ ವಿವರ.</u>

ಕ್ರ. ಸಂ	ಪ್ರಾಥಮಿಕ ಶಾಲೆ	ಅಲಮೇರ (ಬೀರು)	ಆಫೀಸ್ ಟೇಬಲ್	ಕುರ್ಚಿ
1	ಜೋಗುಪಾಳ್ಯ, ಪ್ರಾಥಮಿಕಶಾಲೆ	0	0	0
2	ಮಾರುತಿಮಂದಿರ, ಪ್ರಾಥಮಿಕ ಶಾಲೆ	8	10	50
3	ಬ್ರಾಡ್ವೇ, ಪ್ರಾಥಮಿಕ ಶಾಲೆ	0	0	0
4	ನೀಲಸಂದ್ರ, ಪ್ರಾಥಮಿಕ ಶಾಲೆ	2	1	0
5	ಚಿನ್ನಯ್ಯನ ಪಾಳ್ಯ, ಪ್ರಾಥಮಿಕ ಶಾಲೆ	4	2	4
6	ಪಂಚಶೀಲನಗರ, ಪ್ರಾಥಮಿಕ ಶಾಲೆ	6	2	10
7	ನಾರಾಯಣಪಿಳ್ಳೆ ರಸ್ತೆ, ಪ್ರಾಥಮಿಕ ಶಾಲೆ	0	1	10

8	ಕಾಟನ್ ಪೇಟೆ, ಪ್ರಾಥಮಿಕ ಶಾಲೆ	0	8	10
	ಒಟ್ಟು	**20**	**24**	**84**

ಪ್ರೌಢಶಾಲೆಯ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆಯ ವಿವರ.

ಕ್ರ. ಸಂ	ಪ್ರೌಢಶಾಲೆ	ಅಲಮೇರ (ಬೀರು)	ಆಫೀಸ್ ಟೇಬಲ್	ಕುರ್ಚಿ
1	ಗಾಂಧಿನಗರ, ಪ್ರೌಢಶಾಲೆ	0	0	0
2	ಮಾಗಡಿರಸ್ತೆ, ಪ್ರೌಢಶಾಲೆ	0	0	1
3	ಪಾದರಾಯನಪುರ, ಪ್ರೌಢಶಾಲೆ	5	5	0
4	ಜಯಮಹಲ್, ಪ್ರೌಢಶಾಲೆ	0	0	0
5	ಚಾಮರಾಜಪೇಟೆ, ಪ್ರೌಢಶಾಲೆ	6	4	10
6	ಜೋಗುಪಾಳ್ಯ (ಬಾಲಕರು), ಪ್ರೌಢಶಾಲೆ	0	3	0
7	ಭೈರಸಂದ್ರ, ಪ್ರೌಢಶಾಲೆ	0	0	0
8	ಡಿಸ್ಪೆನ್ಸರಿ ರಸ್ತೆ, ಪ್ರೌಢಶಾಲೆ	0	0	0
9	ಕ್ಲೀವ್ ಲ್ಯಾಂಡ್ ಟೌನ್ (ಬಾಲಕಿಯರು), ಪ್ರೌಢಶಾಲೆ	10	2	30
10	ಅಶೋಕನಗರ, ಪ್ರೌಢಶಾಲೆ	0	0	0
11	ಕಾಕ್ಸ್ ಟೌನ್, ಪ್ರೌಢಶಾಲೆ	0	0	0
12	ಮತ್ತಿಕೆರೆ, ಪ್ರೌಢಶಾಲೆ	6	1	1
	ಒಟ್ಟು	**27**	**15**	**42**

ಪದವಿ ಪೂರ್ವ ಕಾಲೇಜಿನ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆಯ ವಿವರ

ಕ್ರ. ಸಂ	ಪದವಿ ಪೂರ್ವ ಕಾಲೇಜಿನ ಹೆಸರು	ಅಲಮೇರ (ಬೀರು)	ಆಫೀಸ್ ಟೇಬಲ್	ಕುರ್ಚಿ
1	ಧಣಿಸಂದ್ರ, ಪದವಿ ಪೂರ್ವ ಕಾಲೇಜು	10	13	11
2	ಡಿಸ್ಪೆನ್ಸರಿ ರಸ್ತೆ, , ಪದವಿ ಪೂರ್ವ ಕಾಲೇಜು	6	0	20
3	ಪಾದರಾಯನಪುರ, ಪದವಿ ಪೂರ್ವ ಕಾಲೇಜು	5	5	0
4	ಮಾಗಡಿರಸ್ತೆ, ಪದವಿ ಪೂರ್ವ ಕಾಲೇಜು	0	5	1

5	ಚಾಮರಾಜಪೇಟೆ, ಪದವಿ ಪೂರ್ವ ಕಾಲೇಜು	5	5	10
6	ಬನ್ನಪ್ಪ ಪಾರ್ಕ್, ಪದವಿ ಪೂರ್ವ ಕಾಲೇಜು	0	0	0
7	ಶಕ್ತಿಗಣಪತಿನಗರ, ಪದವಿ ಪೂರ್ವ ಕಾಲೇಜು	10	0	0
8	ಉತ್ತರಹಳ್ಳಿ, ಪದವಿ ಪೂರ್ವ ಕಾಲೇಜು	20	15	30
9	ಕಸ್ತೂರಿ ಬಾ ನಗರ, ಪದವಿ ಪೂರ್ವ ಕಾಲೇಜು	10	10	30
	ಒಟ್ಟು	**66**	**53**	**102**

<u>ಪದವಿ ಕಾಲೇಜಿನ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆಯ ವಿವರ.</u>

ಕ್ರ. ಸಂ	ಪದವಿ ಕಾಲೇಜಿನ ಹೆಸರು	ಅಲಮೇರ (ಬೀರು)	ಆಫೀಸ್ ಟೇಬಲ್	ಕುರ್ಚಿ
1	ಭೈರವೇಶ್ವರನಗರ, ಪ್ರಥಮ ದರ್ಜೆ ಕಾಲೇಜು	10	5	20
2	ಮಾಗಡಿರಸ್ತೆ, , ಪ್ರಥಮ ದರ್ಜೆ ಕಾಲೇಜು	4	2	0
3	ಕ್ಲೀಪ್ ಲ್ಯಾಂಡ್ ಟೌನ್, ಪ್ರಥಮ ದರ್ಜೆ ಕಾಲೇಜು	00	00	00
	ಒಟ್ಟು	**14**	**7**	**20**

ಕ್ರ. ಸಂ	ಶಾಲಾ/ಕಾಲೇಜಿನ ಹೆಸರು	ಒಟ್ಟು ಅಲಮೇರ (ಬೀರು)	ಒಟ್ಟು ಆಫೀಸ್ ಟೇಬಲ್	ಒಟ್ಟು ಕುರ್ಚಿ
1	ಶಿಶುವಿಹಾರ ಶಾಲೆಗಳು	19	12	33
2	ಪ್ರಾಥಮಿಕ ಶಾಲೆಗಳು	20	24	84
3	ಪ್ರೌಢಶಾಲೆಗಳು	27	15	42
4	ಪದವಿ ಪೂರ್ವ ಕಾಲೇಜುಗಳು	66	53	102
5	ಪದವಿ ಕಾಲೇಜುಗಳು	14	7	20
	ಒಟ್ಟು	**146**	**111**	**281**

ಪಾಲಿಕೆಯ ಕಾರ್ಯಪಾಲಕಅಭಿಯಂತರರು (ಎಂ.ಪಿ.ಇ.ಡಿ)ರವರು GeM Potralನಿಂದ ದರಗಳನ್ನು ಪಡೆದು ಸಲ್ಲಿಸಿರುವ ದರಗಳ ವಿವರ.

ಕ್ರ. ಸಂ	ಸಾಮಗ್ರಿಗಳ ವಿವರ	ಒಂದಕ್ಕೆ ನೀಡಿರುವ ದರ	ತಗಲುವ ಒಟ್ಟು ಮೊತ್ತ
1	ಅಲುಮೇರಾ	146 x 8,000	11,68,000/-
2	ಆಪೀಸ್ ಟೇಬಲ್	111 x 5,010	5,56,110/-
3	ರಿವಾಲ್ವಿಂಗ್ ಕುರ್ಚಿ	281 x 2,560	7,19,360/-
		ಒಟ್ಟು ಮೊತ್ತ	24,43,470/-

ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ)ರವರ ವಿಭಾಗದಿಂದ "Gem Potral" ನಲ್ಲಿ ಪರಿಶೀಲಿಸಿ ಅಲುಮೇರಾ, ಟೇಬಲ್ ಹಾಗೂ ಕುರ್ಚಿಗಳಿಗೆ ಈ ಮೇಲ್ಕಂಡಂತೆ ದರಗಳನ್ನು ನೀಡಿದ್ದು, ಅಂದಾಜು ತಗಲುವ ಒಟ್ಟು ರೂ.24,43,470/-ಗಳ ದರವನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧ ಪಾಲಿಕೆಯ ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳು ಸಲ್ಲಿಸಿರುವಂತೆ ಬೇಡಿಕೆ ಪತ್ರಗಳನ್ನು ಪರಿಶೀಲಿಸಲಾಗಿ ವಿದ್ಯಾರ್ಥಿಗಳು ಆಸೀನರಾಗಲು ಪೀಠೋಪಕರಣ (Desk), ವಿಜ್ಞಾನ ಪ್ರಯೋಗಾಲಯದ ಪೀಠೋಪಕರಣ ಹಾಗೂ ಅಲಮೇರಾ, ಕುರ್ಚಿ ಮತ್ತು ಚೇರುಗಳಿಗೆ ತಗಲುವ ವೆಚ್ಚವನ್ನು ಅಂದಾಜಿಸಿದ್ದು ತಗಲುವ ವೆಚ್ಚದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಪರಿಕರಗಳ ವಿವರ	ತಗಲುವ ಅಂದಾಜು ಮೊತ್ತ
1	ಪೀಠೋಪಕರಣ (Desk),	1,03,77,400/-
2	ವಿಜ್ಞಾನ ಪ್ರಯೋಗಾಲಯದ ಪೀಠೋಪಕರಣ,	50,00,000/-
3	ಅಲಮೇರಾ, ಕುರ್ಚಿ ಮತ್ತು ಚೇರುಗಳು,	24,43,470/-
	ಒಟ್ಟು ಮೊತ್ತ	**1,78,20,870/-**

ಮುಂದುವರೆದು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಪೀಠೋಪಕರಣ (Desk), ವಿಜ್ಞಾನ ಪ್ರಯೋಗಾಲಯ ಪೀಠೋಪಕರಣ ಹಾಗೂ ಅಲಮೇರಾ, ಆಫೀಸ್ ಟೇಬಲ್, ಕುರ್ಚಿಗಳನ್ನುಖರೀದಿಸಿ ವಿತರಿಸಲು ತಗಲುವ ಅಂದಾಜು ವೆಚ್ಚವನ್ನು 2024-25ನೇ ಸಾಲಿನ ಅಯವ್ಯಯ 11-ಸಾರ್ವಜನಿಕ ಶಿಕ್ಷಣ ಡಿ.ಡಿ.ಓ 350ರಲ್ಲಿ,

ಶಾಲಾ/ಕಾಲೇಜುಗಳಿಗೆ ಪೀಠೋಪಕರಣ ಮತ್ತು ಫಿಟ್ಟಿಂಗ್ ಗಳನ್ನು ಒದಗಿಸಲು ಪಿ.ಸಂಖ್ಯೆ ಪಿ-3608, ಪಿ-3264ರಲ್ಲಿ ರೂ.250.00ಲಕ್ಷಗಳ ಮೀಸಲಿರಿಸಿದ್ದು, ಸದರಿ ಅನುದಾನದಲ್ಲಿ ತಗಲುವ ಅಂದಾಜು ವೆಚ್ಚ ರೂ.1,78,20,870/-ಗಳಿಗೆ ಆಡಳಿತತ್ಮಾಕ ಅನುಮೋದನೆ ಕೋರಿ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಶಿಕ್ಷಣ) ರವರ ಕಛೇರಿ ಸಂಖ್ಯೆ:ವಿ.ಆ(ಶಿ)/ಪಿ.ಆರ್/ಇ-73711/2024-25 ದಿನಾಂಕ: 21-08-2024ರ ಟಿಪ್ಪಣಿ.

ವಿಷಯ ಸಂಖ್ಯೆ:36/2024-25

ತೀರ್ಮಾನ: **ಪಾರದರ್ಶಕ ನಿಯಮಗಳನ್ನು ಪಾಲಿಸುವ ಷರತ್ತಿಗೊಳಪಡಿಸಿ, ವಿಶೇಷ ಆಯುಕ್ತರು (ಶಿಕ್ಷಣ) ರವರು ಮಂಡಿಸಿರುವ ಸಂಖ್ಯೆ:ವಿಆ(ಶಿ)/ಇ-73711/2024-25 ದಿನಾಂಕ:21-08-2024ರ ಟಿಪ್ಪಣಿಯನ್ನು ಒಪ್ಪಿದೆ.**

(ಉಮಾಶಂಕರ್.ಎಸ್.ಆರ್)
ಆಡಳಿತಗಾರರು

ಸಾರ್ವಜನಿಕ ಆರೋಗ್ಯ ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 06 – 09 –2024ರ ನಡವಳಿಗಳು

ವಿಷಯದ ಸಂಖ್ಯೆ: **86/2024-25**

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಲಯಗಳಲ್ಲಿ ಬೀದಿ ನಾಯಿಗಳಿಗೆ ಎಬಿಸಿ (ಸಂತಾನಹರಣ ಶಸ್ತ್ರಚಿಕಿತ್ಸೆ) ಕಾರ್ಯಕ್ರಮ, ಸಾಮೂಹಿಕ ಲಸಿಕಾ ಕಾರ್ಯಕ್ರಮ, ಸಂಯುಕ್ತ ಲಸಿಕೆ ಮತ್ತು ರೇಬೀಸ್ ಲಸಿಕೆ ಖರೀದಿ, ಮೈಕ್ರೋಚಿಪ್ ಪೈಲಟ್ ಕಾರ್ಯಕ್ರಮ, ಕಸಾಯಿಖಾನೆಗಳ (ನಾಗರೀಕ ಮಾಂಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ, ಟ್ಯಾನರಿ ರಸ್ತೆ ಮತ್ತು ನಗರ ಮಾಂಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ) ದುರಸ್ತಿ, ಕಸಾಯಿಖಾನೆಗಳ ನಿರ್ವಹಣೆಗೆ ಮಾನವ ಸಂಪನ್ಮೂಲ, ರಾಸಾಯನಿಕಗಳ ಖರೀದಿ, ನಗರ ದನದ ದೊಡ್ಡಿಯ ದುರಸ್ತಿ, ದೊಡ್ಡಿಯ ನಿರ್ವಹಣೆಗೆ ಮಾನವ ಸಂಪನ್ಮೂಲ, ದನ ಹಿಡಿಯುವ ವಾಹನ ಖರೀದಿ, ವಲಯ ಎಬಿಸಿ ಕೇಂದ್ರಗಳ ದುರಸ್ತಿ ಹಾಗೂ ಇನ್ನಿತರೆ ಕಾರ್ಯಕ್ರಮಗಳಿಗೆ **2024–25**ನೇ ಸಾಲಿನ ಪಾಲಿಕೆಯ ಆಯವ್ಯಯ ಅಂದಾಜುಗಳಲ್ಲಿ ವಿವಿಧ ಆಯವ್ಯಯ ಸಂಕೇತ/ಪಿ ಕೋಡ್‌ಗಳಿಗೆ ನಿಗಧಿಯಾದ **ರೂ.2475.00 ಲಕ್ಷಗಳ** ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದ್ದು, ಸದರಿ ಕಾರ್ಯಕ್ರಮಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ಕೈಕೊಳ್ಳಬೇಕಾಗಿರುವುದರಿಂದ ಟೆಂಡರ್ ಅಹ್ವಾನಿಸಲು ಅನುಮೋದನೆ ಕೋರಿ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆ ತಯಾರಿಸಿ ಜಂಟಿ ನಿರ್ದೇಶಕರು (ಪಶುಪಾಲನೆ), ಬಿಬಿಎಂಪಿ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

I.

05 – ಸಾರ್ವಜನಿಕ ಆರೋಗ್ಯ (Public Health)	
ಆಯವ್ಯಯ ಸಂಕೇತ (Budget Code)	05–240105
ವಿವರಗಳು (Particulars)	ಬೀದಿನಾಯಿ ನಿರ್ವಹಣೆ ವೆಚ್ಚಗಳು – ಪಿ.0273 (Street Dog Management Expenses - P.0273
ಆಯವ್ಯಯ ಅಂದಾಜು (Budget Estimates) ರೂ. ಲಕ್ಷಗಳಲ್ಲಿ – Rs. In Lakhs	**2000.00**

ಕಾರ್ಯಕ್ರಮಗಳು (ವಲಯ)

1. ಎಬಿಸಿ (ಸಂತಾನಹರಣ ಶಸ್ತ್ರಚಿಕಿತ್ಸೆ) ಕಾರ್ಯಕ್ರಮ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಲಯಗಳಲ್ಲಿ ಬೀದಿನಾಯಿಗಳ ನಿಯಂತ್ರಣಕ್ಕೆ ನಿರಂತರವಾಗಿ ನಿಯಮಾನುಸಾರ ಟೆಂಡರ್ / Expression of Interest ಕರೆದು, ಸೇವಾ ಸಂಸ್ಥೆಯವರ ಮುಖೇನ ಸಂತಾನಹರಣ ಶಸ್ತ್ರಚಿಕಿತ್ಸಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಪ್ರಸ್ತುತ ಕಾರ್ಯಕ್ರಮವು ಎಲ್ಲಾ ವಲಯಗಳಲ್ಲಿ ಪ್ರಗತಿಯಲ್ಲಿರುತ್ತದೆ. 2024-25ನೇ ಸಾಲಿನಲ್ಲಿ ಎಬಿಸಿ ಕಾರ್ಯಕ್ರಮಕ್ಕೆ ಅಂದಾಜು **ರೂ.8,06,25,000/-**(ಎಂಟು ಕೋಟಿ ಆರು ಲಕ್ಷದ ಇಪ್ಪತ್ತೈದು ಸಾವಿರ)ಗಳ ಅವಶ್ಯಕತೆ ಇದ್ದು ವಿವರ ಈ ಕೆಳಕಂಡಂತಿದೆ.

ವಲಯ	ಎಬಿಸಿ ಮಾಸಿಕ ಗುರಿ	ಭೌತಿಕ (ವಾರ್ಷಿಕ)	ಎಬಿಸಿ		
			ಆರ್ಥಿಕ (ಪ್ರತಿ ನಾಯಿಗೆ ರೂ. 1,500/-ರಂತೆ) ಬೆಚ್ಚ [April 2024 – August 2024]	ಆರ್ಥಿಕ (ಪ್ರತಿ ನಾಯಿಗೆ ರೂ. 2,000/-ರಂತೆ) ಬೆಚ್ಚ [September 2024 – March 2025]	ಒಟ್ಟು (ವಾರ್ಷಿಕ)
			A	B	A+B
ಪೂರ್ವ	600*12	7200	3000*1500 = 45,00,000	4200*2000 = 84,00,000	1,29,00,000.00
ಪಶ್ಚಿಮ	250*12	3000	1250*1500 = 18,75,000	1750*2000 = 35,00,000	53,75,000.00
ದಕ್ಷಿಣ	250*12	3000	1250*1500 = 18,75,000	1750*2000 = 35,00,000	53,75,000.00
ಆರ್.ಆರ್. ನಗರ	600*12	7200	3000*1500 = 45,00,000	4200*2000 = 84,00,000	1,29,00,000.00
ದಾಸರಹಳ್ಳಿ	250*12	3000	1250*1500 = 18,75,000	1750*2000 = 35,00,000	53,75,000.00
ಬೊಮ್ಮನಹಳ್ಳಿ	600*12	7200	3000*1500 = 45,00,000	4200*2000 = 84,00,000	1,29,00,000.00
ಯಲಹಂಕ	600*12	7200	3000*1500 = 45,00,000	4200*2000 = 84,00,000	1,29,00,000.00
ಮಹದೇವಪುರ	600*12	7200	3000*1500 = 45,00,000	4200*2000 = 84,00,000	1,29,00,000.00
ಒಟ್ಟು		**45,000**	**2,81,25,000.00**	**5,25,00,000.00**	**8,06,25,000.00**
ರೂ. ಎಂಟು ಕೋಟಿ ಆರು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ					

2. ಸಂಯುಕ್ತ ಲಸಿಕೆ (Combined Vaccine) ಖರೀದಿ

ಬಿಬಿಎಂಪಿ ವ್ಯಾಪ್ತಿಯ ಬೀದಿನಾಯಿಗಳಿಗೆ ಕ್ಷೇತ್ರ ಮಟ್ಟದಲ್ಲಿ (ವಾರ್ಡವಾರು) ಸಾಮೂಹಿಕ ಲಸಿಕಾ ಕಾರ್ಯಕ್ರಮವನ್ನು (Mass Dog Vaccine) ಹಮ್ಮಿಕೊಳ್ಳಲು ಸಂಯುಕ್ತ ಲಸಿಕೆ (Combined Vaccine) ಖರೀದಿ ಪ್ರಕ್ರಿಯೆಗೆ **ರೂ.5,94,64,062/-**(ಐದು ಕೋಟಿ ತೊಂಬತ್ತಾನ್ಲುಕ್ಕ ಲಕ್ಷದ ಅರವತ್ತಾನ್ಲುಕ್ಕ ಸಾವಿರದ ಅರವತ್ತೆರಡು)ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಲಯ	ಬೀದಿ ನಾಯಿಗಳ ಸಂಖ್ಯೆ (2023ನೇ ಸಾಲಿನ ಸಮೀಕ್ಷೆ)	ಶೇಕಡ 50% ರಷ್ಟು ಬೀದಿನಾಯಿಗಳ ಸಂಖ್ಯೆ	ಎಬಿಸಿ ಕೇಂದ್ರದಲ್ಲಿನ 2024-25ನೇ ಸಾಲಿನ ಬೀದಿನಾಯಿಗಳ ಭೌತಿಕ ಗುರಿ	ಒಟ್ಟು ಸಂಯುಕ್ತ ಲಸಿಕೆ Combined Vaccine	ಪ್ರತಿ ಬೀದಿನಾಯಿಗೆ ಒಂದು ಸಂಯುಕ್ತ ಲಸಿಕೆಗೆ ರೂ. 322/- ರಂತೆ ಒಟ್ಟು ಮೊತ್ತ ರೂ.ಗಳಲ್ಲಿ
ಪೂರ್ವ	37685	18843	7200	26043	83,85,846.00
ಪಶ್ಚಿಮ	22025	11013	3000	14013	45,12,186.00
ದಕ್ಷಿಣ	23241	11621	3000	14621	47,07,962.00
ಆರ್.ಆರ್. ನಗರ	41266	20633	7200	27833	89,62,226.00
ದಾಸರಹಳ್ಳಿ	21221	10611	3000	13611	43,82,742.00
ಬೊಮ್ಮನಹಳ್ಳಿ	39183	19592	7200	26792	86,27,024.00
ಯಲಹಂಕ	36343	18172	7200	25372	81,69,784.00
ಮಹದೇವಪುರ	58371	29186	7200	36386	1,17,16,292.00
ಒಟ್ಟು	**279335**	**139671**	**45000**	**184671**	**5,94,64,062.00**
ರೂ. ಐದು ಕೋಟಿ ತೊಂಬತ್ತಾಲ್ಕು ಲಕ್ಷದ ಅರವತ್ತಾಲ್ಕು ಸಾವಿರದ ಅರವತ್ತೆರಡು ಮಾತ್ರ					

3. ರೇಬೀಸ್ (Rabies) ಲಸಿಕೆ ಖರೀದಿ

ಬಿಬಿಎಂಪಿ ವ್ಯಾಪ್ತಿಯ ಬೀದಿನಾಯಿಗಳಿಗೆ ಕ್ಷೇತ್ರ ಮಟ್ಟದಲ್ಲಿ (ವಾರ್ಡವಾರು) ಸಾಮೂಹಿಕ ಲಸಿಕಾ ಕಾರ್ಯಕ್ರಮವನ್ನು (Mass Dog Vaccine) ಹಮ್ಮಿಕೊಳ್ಳಲು ರೇಬೀಸ್ ಲಸಿಕೆ (Rabies Vaccine) ಖರೀದಿ ಪ್ರಕ್ರಿಯೆಗೆ **ರೂ.49,58,321/-**(ನಲವತ್ತೊಂಬತ್ತು ಲಕ್ಷದ ಐವತ್ತೆಂಟು ಸಾವಿರದ ಮೂರು ನೂರ ಇಪ್ಪತ್ತೊಂದು)ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಲಯ	ಬೀದಿ ನಾಯಿಗಳ ಸಂಖ್ಯೆ (2023ನೇ ಸಾಲಿನ ಸಮೀಕ್ಷೆ)	ಶೇಕಡ 50% ರಷ್ಟು ಬೀದಿನಾಯಿಗಳ ಸಂಖ್ಯೆ (ವಾರ್ಷಿಕ ಗುರಿ)	ಪ್ರತಿ ಬೀದಿನಾಯಿಗೆ ಒಂದು ಡೋಸಿನ ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆಗೆ ರೂ 35.5/- ರಂತೆ ಒಟ್ಟು ಮೊತ್ತ ರೂ.ಗಳಲ್ಲಿ
ಪೂರ್ವ	37685	18843	668926.50
ಪಶ್ಚಿಮ	22025	11013	390961.50
ದಕ್ಷಿಣ	23241	11621	412545.50
ಆರ್.ಆರ್. ನಗರ	41266	20633	732471.50
ದಾಸರಹಳ್ಳಿ	21221	10611	376690.50
ಬೊಮ್ಮನಹಳ್ಳಿ	39183	19592	695516.00
ಯಲಹಂಕ	36343	18172	645106.00
ಮಹದೇವಪುರ	58371	29186	1036103.00
ಒಟ್ಟು	**279335**	**139671**	49,58,320.50
ರೂಪಾಯಿ ನಲವತ್ತೊಂಬತ್ತು ಲಕ್ಷದ ಐವತ್ತೆಂಟು ಸಾವಿರದ ಮೂರು ನೂರ ಇಪ್ಪತ್ತು ರೂ ಐವತ್ತು ಪೈಸೆ ಮಾತ್ರ			

4. ಬೀದಿ ನಾಯಿ ಕಡಿತಕ್ಕೆ ಪರಿಹಾರ

ಪಾಲಿಕೆ ವ್ಯಾಪ್ತಿಯ ಎಲ್ಲಾ ವಲಯಗಳಲ್ಲೂ ಬೀದಿನಾಯಿ ಕಡಿತಕ್ಕೆ ಒಳಗಾದ ಸಾರ್ವಜನಿಕರಿಗೆ ನಿಯಮಾನುಸಾರ ಪರಿಹಾರ (ಚಿಕಿತ್ಸಾ ವೆಚ್ಚ ಮತ್ತು ಪರಿಹಾರ) ಒದಗಿಸಲು 2024-25ನೇ ಸಾಲಿನಲ್ಲಿ ಅಂದಾಜು **ರೂ.5,50,000/-**(ರೂಪಾಯಿ ಐದು ಲಕ್ಷದ ಐವತ್ತು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಿವರ	ಬೀದಿನಾಯಿ ಕಡಿತಕ್ಕೆ ಪರಿಹಾರ								ಒಟ್ಟು
ವಲಯ	ಪೂರ್ವ	ಪಶ್ಚಿಮ	ದಕ್ಷಿಣ	ಬೊಮ್ಮನ ಹಳ್ಳಿ	ಯಲಹಂಕ	ಆರ್.ಆರ್ ನಗರ	ಮಹದೇವ ಪುರ	ದಾಸರ ಹಳ್ಳಿ	
ಮೊತ್ತ	75,000	50,000	50,000	75,000	75,000	75,000	1,00,000	50,000	**5,50,000.00**
	ರೂಪಾಯಿ ಐದು ಲಕ್ಷದ ಐವತ್ತು ಸಾವಿರ ಮಾತ್ರ								

ಕಾರ್ಯಕ್ರಮಗಳು (ಕೇಂದ್ರ)

5. ಸಾಮೂಹಿಕ ಲಸಿಕಾ ಕಾರ್ಯಕ್ರಮ – Mass Dog Vaccination

ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳಿಗೆ ಕ್ಷೇತ್ರ ಮಟ್ಟದಲ್ಲಿ (ವಾರ್ಡವಾರು) ಹುಚ್ಚುನಾಯಿ ರೋಗದ ವಿರುದ್ಧ ರೇಬೀಸ್ ಲಸಿಕೆ (Rabies Vaccine) ಮತ್ತು ಸಂಯುಕ್ತ ಲಸಿಕಾ (Combined Vaccine) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು 2024-25ನೇ ಸಾಲಿನಲ್ಲಿ ಅಂದಾಜು **ರೂ.3,00,26,900/-**(ರೂಪಾಯಿ ಮೂರು ಕೋಟಿ ಇಪ್ಪತ್ತಾರು ಸಾವಿರದ ಒಂಬೈನೂರು)ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಲಯ	ಬೀದಿ ನಾಯಿಗಳ ಸಂಖ್ಯೆ (2023ನೇ ಸಾಲಿನ ಸಮೀಕ್ಷೆ)	ಶೇಕಡ 50% ರಷ್ಟು ಬೀದಿನಾಯಿಗಳ ಸಂಖ್ಯೆ (ವಾರ್ಷಿಕ ಗುರಿ)	ಶೇಕಡ 25% ರಷ್ಟು ಬೀದಿನಾಯಿಗಳ ಸಂಖ್ಯೆ	ರೇಬೀಸ್ ಲಸಿಕೆಗೆ ಪ್ರತಿ ನಾಯಿಗೆ ರೂ. 165/-ರಂತೆ ಒಟ್ಟು ವೆಚ್ಚ [April 2024 – September 2024]	ಸಾಮೂಹಿಕ ಲಸಿಕಾ ಕಾರ್ಯಕ್ರಮಕ್ಕೆ ತಗಲುವ ವೆಚ್ಚ (ಪ್ರತಿ ಬೀದಿ ನಾಯಿಗೆ ರೂ. 265/- ರಂತೆ) [October 2024 – March 2025]	ಒಟ್ಟು (ವಾರ್ಷಿಕ)
				A	B	A+B
ಪೂರ್ವ	37685	18843	9421	9421*165 = 15,54,465	9421*265 = 24,96,565	40,51,030.00
ಪಶ್ಚಿಮ	22025	11013	5506	5506*165 = 9,08,490	5506*265 = 14,59,090	23,67,580.00
ದಕ್ಷಿಣ	23241	11621	5810	5810*165 = 9,58,650	5810*265 = 15,39,650	24,98,300.00
ಆರ್.ಆರ್. ನಗರ	41266	20633	10316	10316*165 = 17,02,140	10316*265 = 27,33,740	44,35,880.00
ದಾಸರಹಳ್ಳಿ	21221	10611	5305	5305*165 = 8,75,325	5305*265 = 14,05,825	22,81,150.00
ಬೊಮ್ಮನ ಹಳ್ಳಿ	39183	19592	9795	9795*165 = 16,16,175	9795*265 = 25,95,675	42,11,850.00
ಯಲಹಂಕ	36343	18172	9085	9085*165 = 14,99,025	9085*265 = 24,07,525	39,06,550.00
ಮಹದೇವ ಪುರ	58371	29186	14592	14592*165 = 24,07,680	14592*265 = 38,66,880	62,74,560.00
ಒಟ್ಟು	279335	139671	69830	**1,15,21,950**	**1,85,04,950**	**3,00,26,900.00**
	ರೂಪಾಯಿ ಮೂರು ಕೋಟಿ ಇಪ್ಪತ್ತಾರು ಸಾವಿರದ ಒಂಬೈನೂರು ಮಾತ್ರ					

6. ರೆಫ್ರಿಜಿರೇಟರ್ ಖರೀದಿ

ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳಿಗೆ ಕ್ಷೇತ್ರ ಮಟ್ಟದಲ್ಲಿ (ವಾರ್ಡವಾರು) ಹುಚ್ಚುನಾಯಿ ರೋಗದ ವಿರುದ್ಧ ರೇಬೀಸ್ ಲಸಿಕೆ (Rabies Vaccine) ಮತ್ತು ಸಂಯುಕ್ತ ಲಸಿಕಾ (Combined Vaccine) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅವಶ್ಯವಿರುವ ಲಸಿಕೆಯನ್ನು ಶೇಖರಿಡಿಸಲು ಎಲ್ಲಾ ವಲಯಗಳಿಗೆ ರೆಫ್ರಿಜಿರೇಟರ್‌ಗಳ ಖರೀದಿಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ. 4,80,000/–** (ನಾಲ್ಕು ಲಕ್ಷದ ಎಂಬತ್ತು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಲಯಗಳಲ್ಲಿ ಈ ಕೆಳಕಂಡಂತೆ ಲಸಿಕೆಗಳ ಶೇಖರಣೆ ಮಾಡಬೇಕಾಗಿರುತ್ತದೆ.

ವಲಯ	ಬೀದಿ ನಾಯಿಗಳ ಸಂಖ್ಯೆ (2023ನೇ ಸಾಲಿನ ಸಮೀಕ್ಷೆ)	ಶೇಕಡ 50% ರಷ್ಟು ಬೀದಿನಾಯಿಗಳ ಸಂಖ್ಯೆ	ಎಬಿಸಿ ಕೇಂದ್ರದಲ್ಲಿನ 2024–25ನೇ ಸಾಲಿನ ಬೀದಿನಾಯಿಗಳ ಭೌತಿಕ ಗುರಿ	ಒಟ್ಟು ಸಂಯುಕ್ತ ಲಸಿಕೆ (Combined Vaccine) A	ಒಟ್ಟು ರೇಬೀಸ್ ಲಸಿಕೆ (Rabies Vaccine) B	ಒಟ್ಟು ಲಸಿಕೆ A+B
ಪೂರ್ವ	37685	18843	7200	26043	26043	52086
ಪಶ್ಚಿಮ	22025	11013	3000	14013	14013	28026
ದಕ್ಷಿಣ	23241	11621	3000	14621	14621	29242
ಆರ್.ಆರ್. ನಗರ	41266	20633	7200	27833	27833	55666
ದಾಸರಹಳ್ಳಿ	21221	10611	3000	13611	13611	27222
ಬೊಮ್ಮನಹಳ್ಳಿ	39183	19592	7200	26792	26792	53584
ಯಲಹಂಕ	36343	18172	7200	25372	25372	50744
ಮಹದೇವಪುರ	58371	29186	7200	36386	36386	72772
ಒಟ್ಟು	**279335**	**139671**	**45000**	**184671**	**184671**	**369342**

ವಿವರ	ರೇಬೀಸ್ ಮತ್ತು ಸಂಯುಕ್ತ ಲಸಿಕೆ ಶೇಖರಿಸಲು ರೆಫ್ರಿಜಿರೇಟರ್‌ಗಳ ಖರೀದಿ								ಒಟ್ಟು
ವಲಯ	ಪೂರ್ವ	ಪಶ್ಚಿಮ	ದಕ್ಷಿಣ	ಬೊಮ್ಮನಹಳ್ಳಿ	ಯಲಹಂಕ	ಆರ್.ಆರ್.ನಗರ	ಮಹದೇವಪುರ	ದಾಸರಹಳ್ಳಿ	
ಮೊತ್ತ	60,000	60,000	60,000	60,000	60,000	60,000	60,000	60,000	**4,80,000.00**
	ರೂಪಾಯಿ ನಾಲ್ಕು ಲಕ್ಷದ ಎಂಬತ್ತು ಸಾವಿರ								

7. ಫ್ರೀಜರ್ ಖರೀದಿ

ಪಾಲಿಕೆ ವ್ಯಾಪ್ತಿಯಲ್ಲಿ ಸತ್ತ ಬೀದಿನಾಯಿಗಳ ದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸುವ ಸಂಬಂಧ ದೇಹವನ್ನು ಸಂರಕ್ಷಿಸಿಡಲು ಎಲ್ಲಾ ವಲಯಗಳಿಗೆ ಫ್ರೀಜರ್‌ಗಳನ್ನು ಖರೀದಿಸಲು 2024–25ನೇ ಸಾಲಿನಲ್ಲಿ ಅಂದಾಜು **ರೂ.4,80,000/–** (ನಾಲ್ಕು ಲಕ್ಷದ ಎಂಬತ್ತು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಿವರ	ಫ್ರೀಜರ್ ಖರೀದಿ								ಒಟ್ಟು
ವಲಯ	ಪೂರ್ವ	ಪಶ್ಚಿಮ	ದಕ್ಷಿಣ	ಬೊಮ್ಮನಹಳ್ಳಿ	ಯಲಹಂಕ	ಆರ್.ಆರ್ ನಗರ	ಮಹದೇವಪುರ	ದಾಸರಹಳ್ಳಿ	
ಮೊತ್ತ	60,000	60,000	60,000	60,000	60,000	60,000	60,000	60,000	**4,80,000.00**
	ರೂಪಾಯಿ ನಾಲ್ಕು ಲಕ್ಷದ ಎಂಬತ್ತು ಸಾವಿರ								

8. ಮೈಕ್ರೋಚಿಪ್ ಪೈಲಟ್ ಕಾರ್ಯಕ್ರಮ

ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳಿಗೆ ಕ್ಷೇತ್ರ ಮಟ್ಟದಲ್ಲಿ (ವಾರ್ಡವಾರು) ಮತ್ತು ಎಬಿಸಿ ಕೇಂದ್ರದಲ್ಲಿ ಹುಚ್ಚುನಾಯಿ ರೋಗದ ವಿರುದ್ಧ ರೇಬೀಸ್ ಲಸಿಕೆ ಮತ್ತು ಸಂಯುಕ್ತ ಲಸಿಕಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಯಶಸ್ವಿಗೊಳಿಸಲು ಮೈಕ್ರೋಚಿಪ್ ಅಳವಡಿಸುವುದು ಅವಶ್ಯಕವಿರುತದೆ. ಈ ಹಿನ್ನಲೆಯಲ್ಲಿ ಪಾಲಿಕೆಯ ಆಯ್ದ ಎರಡು ವಾರ್ಡ್‌ಗಳಲ್ಲಿ (ಪಶ್ಚಿಮ ಅಥವಾ ಆರ್.ಆರ್.ನಗರ ವಲಯಗಳಲ್ಲಿ) ಬೀದಿನಾಯಿಗಳಿಗೆ ಮೈಕ್ರೋಚಿಪ್ ಪೈಲಟ್ ಕಾರ್ಯಕ್ರಮ ಹಮ್ಮಿಕೊಳ್ಳಲು 2024–25ನೇ ಸಾಲಿನಲ್ಲಿ ಅಂದಾಜು ರೂ.1,00,000/–(ಒಂದು ಲಕ್ಷ)ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಿವರ	ಮೈಕ್ರೋಚಿಪ್ ಪೈಲಟ್ ಕಾರ್ಯಕ್ರಮ	ಒಟ್ಟು
ವಲಯ	ಪಶ್ಚಿಮ / ಆರ್.ಆರ್.ನಗರ	
ಮೊತ್ತ	1,00,000	**1,00,000.00**
	ರೂಪಾಯಿ ಒಂದು ಲಕ್ಷ ಮಾತ್ರ	

9. ರೇಬೀಸ್ ಶಂಕಿತ ಬೀದಿನಾಯಿಗಳ ಮೆದುಳಿನ ಮಾದರಿ ಪರೀಕ್ಷೆ

ಪಶುವೈದ್ಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು ಇಲ್ಲಿರುವ ರೇಬೀಸ್ ರೋಗವನ್ನು ನಿರ್ಧರಿಸುವ ಪ್ರಯೋಗಾಲಯವು ದಕ್ಷಿಣ ಏಷ್ಯಾದಲ್ಲಿರುವ ಏಕೈಕ OIE ನಿಂದ ಅಂಗೀಕೃತಗೊಂಡ ಪ್ರಯೋಗಾಲಯವಾಗಿರುತ್ತದೆ. ಸದರಿ ಪ್ರಯೋಗಾಲಯದಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಸಾವಿಗೀಡಾದ ರೇಬೀಸ್ ಶಂಕಿತ ಬೀದಿನಾಯಿಗಳ ಮೆದುಳಿನ ಮಾದರಿಯನ್ನು ಪರೀಕ್ಷೆ ಮಾಡಿ ರೇಬೀಸ್ ರೋಗ ಪತ್ತೆ ಹಚ್ಚಲಾಗುತ್ತಿರುತ್ತದೆ. ಇದರಿಂದಾಗಿ ರೇಬೀಸ್ ರೋಗ ಕಂಡು ಬಂದ ಪಾಲಿಕೆಯ ವ್ಯಾಪ್ತಿಯಲ್ಲಿನ ಸ್ಥಳಗಳಲ್ಲಿ ರೇಬೀಸ್ ನಿಯಂತ್ರಿಸಲು ಬೀದಿನಾಯಿಗಳಲ್ಲಿ ರೇಬೀಸ್ ರೋಗದ ವಿರುದ್ಧ ರಿಂಗ್ ವ್ಯಾಕ್ಸಿನೇಷನ್ (Ring Vaccination) ಕಾರ್ಯಕ್ರಮವನ್ನು ನಿರ್ವಹಿಸಲು ಅನುಕೂಲವಾಗಿರುತ್ತದೆ.

ಸದರಿ ಪ್ರಯೋಗಾಲಯದಲ್ಲಿ ನಿರ್ವಹಿಸುವ ಪ್ರತಿ ಮೆದುಳಿನ ಮಾದರಿಯ ಪರೀಕ್ಷೆಗೆ ಪ್ರಯೋಗಾಲಯವು ನಿಗಧಿಪಡಿಸಿರುವ ರೂ.300/–ನ್ನು ಪಾಲಿಕೆಯು ಪಾವತಿಸಬೇಕಾರುತ್ತದೆ. ಸದರಿ ಪ್ರಕ್ರಿಯೆಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.2,00,000/–** (ಎರಡು ಲಕ್ಷ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ವಿವರ	ರೇಬೀಸ್ ಶಂಕಿತ ಬೀದಿನಾಯಿಗಳ ಮೆದುಳಿನ ಮಾದರಿ ಪರೀಕ್ಷೆ								ಒಟ್ಟು
ವಲಯ	ಪೂರ್ವ	ಪಶ್ಚಿಮ	ದಕ್ಷಿಣ	ಬೊಮ್ಮನಹಳ್ಳಿ	ಯಲಹಂಕ	ಆರ್.ಆರ್. ನಗರ	ಮಹದೇವಪುರ	ದಾಸರಹಳ್ಳಿ	
ಮೊತ್ತ	25,000	25,000	25,000	25,000	25,000	25,000	25,000	25,000	**2,00,000.00**
	ರೂಪಾಯಿ ಎರಡು ಲಕ್ಷಗಳು ಮಾತ್ರ								

10. ತಾಂತ್ರಿಕ ಸಮ್ಮೇಳನಗಳಲ್ಲಿ ಭಾಗವಹಿಸುವಿಕೆ (Technical Conference)

ಪಶುಪಾಲನಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳು ತಾಂತ್ರಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ಜ್ಞಾನವನ್ನು ವೃದ್ಧಿಸಿಕೊಳ್ಳಲು ಅನುವು ಮಾಡುವುದು. (ರಾಷ್ಟ್ರೀಯ ರೇಬೀಸ್ ಸಮ್ಮೇಳನ – Association for Prevention and Control of Rabies in India/ಆಧುನಿಕ ವಧಾಗಾರ – ಹೈದರಾಬಾದ್ ಭೇಟಿ/ಸಂಚಾರಿ ವಿದ್ಯುತ್ ಚಿತಾಗಾರಗಳ ನಿರ್ವಹಣೆ – ಪೂಣೆ ಭೇಟಿ ಇತ್ಯಾದಿ). ಸದರಿ ಕಾರ್ಯಕ್ರಮಕ್ಕೆ 2024–25ನೇ ಸಾಲಿನಲ್ಲಿ ಅಂದಾಜು ರೂ.**4,00,000/–**(ನಾಲ್ಕು ಲಕ್ಷ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ತಾಂತ್ರಿಕ ಸಮ್ಮೇಳನಗಳಲ್ಲಿ ಭಾಗವಹಿಸುವಿಕೆ (Technical Conference)	ಒಟ್ಟು
1. Pre Conference Workshop 2. Travel Expenses 3. Boarding Expenses 4. Membership Expenses	**4,00,000.00**
ರೂಪಾಯಿ ನಾಲ್ಕು ಲಕ್ಷಗಳು ಮಾತ್ರ	

11. ಕರಪತ್ರ, ಬ್ಯಾನರ್ ಮುದ್ರಣ

ಅರಿವು/ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲು ವಲಯ ಮಟ್ಟದಲ್ಲಿ ಕರಪತ್ರ, ಬ್ಯಾನರ್, ಪೋಸ್ಟರ್ ಮತ್ತು ಕೈಪಿಡಿ ವಿತರಣೆಗಳನ್ನು ಮುದ್ರಿಸಲು 2024–25ನೇ ಸಾಲಿನಲ್ಲಿ ಅಂದಾಜು **ರೂ.4,71,000/–** (ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ. ಪಾಲಿಕೆಯ ಪಶುಪಾಲನಾ ವಿಭಾಗದ ಕಾರ್ಯಕ್ರಮಗಳು (ಎಬಿಸಿ, ಸಾಮೂಹಿಕ ಲಸಿಕಾ ಕಾರ್ಯಕ್ರಮ, ಬೀದಿನಾಯಿ ಕಡಿತಕ್ಕೆ ಪರಿಹಾರ ಹಾಗು ಇನ್ನಿತರ ಪ್ರಾಣಿ ಕಲ್ಯಾಣ ಕಾರ್ಯಕ್ರಮಗಳು).

ಕ್ರ.ಸಂ	ವಿವರ	ಪ್ರತಿಯೊಂದಕ್ಕೆ ಅಂದಾಜು ರೂ.	ಪ್ರಮಾಣ	ಒಟ್ಟು
1	ಕರಪತ್ರ	ರೂ. 5/–	7200 (7200 x 5)	36,000.00
2	ಪೋಸ್ಟರ್	ರೂ. 50/–	1500 (1500 x 50)	75,000.00
3	ಕೈಪಿಡಿ	ರೂ. 300/–	1000 (1000 x 300)	3,00,000.00
4	ಬ್ಯಾನರ್	ರೂ. 1,500/–	40 (40 x 1500)	60,000.00
			ಒಟ್ಟು ಮೊತ್ತ	**4,71,000.00**
ರೂಪಾಯಿ ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರಗಳು ಮಾತ್ರ				

12. ಪ್ರಾಣಿ ಸಂರಕ್ಷಣಾ ಕೇಂದ್ರ (Rescue Centre)

ಪಾಲಿಕೆಯ ಯಾವುದಾದರು ಒಂದು ವಲಯದಲ್ಲಿ ಅಪಘಾತಕ್ಕೀಡಾದ/ಗಾಯಗೊಂಡ ಬೀದಿನಾಯಿಗಳ ಚಿಕಿತ್ಸೆ ಮತ್ತು ಆರೈಕೆಗಾಗಿ ಪ್ರಾಣಿ ಸಂರಕ್ಷಣಾ ಕೇಂದ್ರ ಸ್ಥಾಪಿಸುವ ಅಗತ್ಯವಿದ್ದು, ಸದರಿ ಕಾರ್ಯಕ್ರಮಕ್ಕೆ 2024–25ನೇ ಸಾಲಿನಲ್ಲಿ ಅಂದಾಜು ರೂ.**50,00,000/–** (ಐವತ್ತು ಲಕ್ಷ)ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರಸಂ	ವಿವರ	ಮೊತ್ತ
1	ಪ್ರಾಣಿ ಸಂರಕ್ಷಣಾ ಕೇಂದ್ರ ಸ್ಥಾಪನೆ (50 ಕೆನೆಲ್ ಸಾಮರ್ಥ್ಯವುಳ್ಳ)	50,00,000.00
	ಒಟ್ಟು ರೂ.	**50,00,000.00**
	ರೂಪಾಯಿ ಐವತ್ತು ಲಕ್ಷಗಳು ಮಾತ್ರ	

13. ಬೀದಿನಾಯಿಗಳ ರೆಸ್ಕ್ಯೂ/ಸಂರಕ್ಷಣಾ ಕಾರ್ಯಕ್ರಮ

ಪಾಲಿಕೆಯ ವ್ಯಾಪ್ತಿಯಲ್ಲಿ ಅಪಘಾತಕ್ಕೀಡಾದ/ಗಾಯಗೊಂಡ ಬೀದಿನಾಯಿಗಗಳನ್ನು ಪ್ರಾಣಿ ಸಂರಕ್ಷಣಾ ಕೇಂದ್ರದಲ್ಲಿ ಚಿಕಿತ್ಸೆ ಮತ್ತು ಆರೈಕೆಗಾಗಿ 2024-25ನೇ ಸಾಲಿನಲ್ಲಿ ಅಂದಾಜು ರೂ.**45,12,779/-**(ರೂಪಾಯಿ ನಲವತ್ತೈದು ಲಕ್ಷದ ಹನ್ನೆರಡು ಸಾವಿರದ ಏಳು ನೂರ ಎಪ್ಪತ್ತೊಂಬತ್ತು ಮಾತ್ರ)ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

Total Number of Kennels - **50**			
Projected cases per month - **200**			
Sl.No	**Particulars**	**Estimated Cost / Month**	**Estimated Cost for Six Months**
1	Salary for Veterinarian (MVSc): Rs. 75,000/- Salary for 4 Attenders: 22,000*4 = Rs. 88,000/-	1,63,000	9,78,000.00
2	Cleaning Materials: Disinfectants, Broomsticks, Mops, Scrubbers etc.,	25,000	1,50,000.00
3	Food: 2 Meals/Day – Rice (Chicken / Liver)	25,000	1,50,000.00
4	Medicines: Rs. 200/- Per Dog – Blood tests, X-Ray, IV Fluids, Antibiotics, NSAIDs, Anti-Inflammatory drugs, Wound Dressing etc.,	3,09,130	18,54,779.00
5	Surgical Intervention	2,00,000	12,00,000.00
6	Administration and Miscellaneous Expenses	30,000	1,80,000.00
	Total:	**7,52,130.00**	**45,12,779.00**
	ರೂಪಾಯಿ ನಲವತ್ತೈದು ಲಕ್ಷದ ಹನ್ನೆರಡು ಸಾವಿರದ ಏಳು ನೂರ ಎಪ್ಪತ್ತೊಂಬತ್ತು ಮಾತ್ರ		

14. ವಲಯ ಎಬಿಸಿ ಕೇಂದ್ರಗಳ ದುರಸ್ತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನಾ ವಿಭಾಗದ ಕಾರ್ಯಕ್ರಮವಾದ ಬೀದಿನಾಯಿಗಳ ಶಸ್ತ್ರಚಿಕಿತ್ಸೆ ನೆರವೇರಿಸುವ ಸಂತಾನಹರಣ ಶಸ್ತ್ರಚಿಕಿತ್ಸಾ ಕೇಂದ್ರಗಳ (ಎಬಿಸಿ ಕೇಂದ್ರಗಳು) ಪೇಂಟಿಂಗ್, ಎಲೆಕ್ಟ್ರಿಕಲ್, ವೆಲ್ಡಿಂಗ್, ಪ್ಲಂಬಿಂಗ್ ಹಾಗು ಇನ್ನಿತರ ದುರಸ್ತಿ ಕಾಮಾಗಾರಿಗೆ 2024-25ನೇ ಸಾಲಿನಲ್ಲಿ ಅಂದಾಜು **ರೂ.1,27,32,000/-** (ಒಂದು ಕೋಟಿ ಇಪ್ಪತ್ತೇಳು ಲಕ್ಷದ ಮೂವತ್ತೆರಡು ಸಾವಿರಗಳು) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

Sl.No	**Zones / ABC Centre**	**Estimated Cost**
1	West & South (CVH Campus, Chamarajapete)	**1,00,00,000.00**
2	East (Veterinary Polyclinic Campus, Queens Road)	27,32,000.00
	Total	**1,27,32,000.00**
	ಒಂದು ಕೋಟಿ ಇಪ್ಪತ್ತೇಳು ಲಕ್ಷದ ಮೂವತ್ತೆರಡು ಸಾವಿರಗಳು ಮಾತ್ರ	

II.

05 – ಸಾರ್ವಜನಿಕ ಕಾಮಗಾರಿಗಳು (Public Works)	
ಆಯವ್ಯಯ ಸಂಕೇತ (Budget Code)	05–220410
ವಿವರಗಳು (Particulars)	ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ ಕಸಾಯಿಖಾನೆ – ಪಿ2166 Repairs & Maintanance - Buildings Slaughter Houses/Abattoirs - P2166
ಆಯವ್ಯಯ ಅಂದಾಜು (Budget Estimates) ರೂ. ಲಕ್ಷಗಳಲ್ಲಿ – Rs. In Lakhs	**125.00**

1. ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ ಸಂಸ್ಥೆಯ ದುರಸ್ತಿ ಮತ್ತು ಇ.ಟಿ.ಪಿ ಘಟಕದ ಸ್ಥಾಪನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ ಇಲ್ಲಿಯ ಕಟ್ಟಡ ಮತ್ತು ಆವರಣದ ದುರಸ್ತಿ ಕಾಮಾಗಾರಿಗೆ ಹಾಗು ಇ.ಟಿ.ಪಿ ಘಟಕದ ಸ್ಥಾಪನೆ ಮತ್ತು ನಿರ್ವಹಣೆಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.75,00,000/–** (ಎಪ್ಪತ್ತೈದು ಲಕ್ಷ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

SL. No.	PARTICULARS	Estimated Cost in Rs.
1	DISMANTLING WORK	10,00,000.00
	TOP ROOFING AND RAIN WATER HARVESTING	15,00,000.00
	DRAINAGE AND PLUMBING WORK	5,00,000.00
	FLOORING RENOVATION	5,00,000.00
	ELECTRICAL	5,00,000.00
	OFFICE RENOVATION	5,00,000.00
2	INSTALLATION OF MODERN ETP, MAINTENANCE AND MANPOWER	30,00,000.00
	TOTAL	**75,00,000.00**
ರೂಪಾಯಿ ಎಪ್ಪತ್ತೈದು ಲಕ್ಷ ಮಾತ್ರ		

2. ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ ಸಂಸ್ಥೆಗೆ ಪ್ರಿ ಫ್ಯಾಬ್ರಿಕೇಟೆಡ್ ಕಂಟೈನರ್ ಖರೀದಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಛೇರಿ ಅವಶ್ಯಕತೆಯಿದ್ದು, ಈ ಸಂಬಂಧ ಪ್ರಿ ಫ್ಯಾಬ್ರಿಕೇಟೆಡ್ ಕಂಟೈನರ್/ಕ್ಯಾಬಿನ್ ಖರೀದಿಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.26,00,000/–** (ಇಪ್ಪತ್ತಾರು ಲಕ್ಷ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರಮ. ಸಂಖ್ಯೆ	ವಿವರ	ಅಂದಾಜು ಮೊತ್ತ
1	ಪ್ರಿ ಫ್ಯಾಬ್ರಿಕೇಟೆಡ್ ಕಂಟೈನರ್	26,00,000.00
ಒಟ್ಟು		**26,00,000.00**
ರೂಪಾಯಿ ಇಪ್ಪತ್ತಾರು ಲಕ್ಷ ಮಾತ್ರ		

3. ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ ಇಲ್ಲಿಯ ಇ.ಟಿ.ಪಿ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ ಇಲ್ಲಿಯ ಇ.ಟಿ.ಪಿ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಅವಶ್ಯವಿರುವ ರಾಸಾಯನಿಕಗಳು ಮತ್ತು ಮಾನವ ಸಂಪನ್ಮೂಲ ಪೂರೈಕೆಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.24,00,000/–**(ಇಪ್ಪತ್ತ ನಾಲ್ಕು ಲಕ್ಷ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರಮ. ಸಂಖ್ಯೆ	ವಿವರ	ಅಂದಾಜು ಮೊತ್ತ (ಮಾಸಿಕ)	ಅಂದಾಜು ಮೊತ್ತ (ವಾರ್ಷಿಕ)
1	ಇ.ಟಿ.ಪಿ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಅವಶ್ಯವಿರುವ ರಾಸಾಯನಿಕಗಳು ಮತ್ತು ಮಾನವ ಸಂಪನ್ಮೂಲ (ಓರ್ವ ಪರಿಸರ ಅಭಿಯಂತರರು ಮತ್ತು ಮೋಟಾರ್ ನಿರ್ವಾಹಕ ಹಾಗು ಮೂರು ಜನ ಸಹಾಯಕರು)	2,00,000.00	24,00,000.00
ಒಟ್ಟು			**24,00,000.00**
ರೂಪಾಯಿ ಇಪ್ಪತ್ನಾಲ್ಕು ಲಕ್ಷ ಮಾತ್ರ			

III.

05 – ಸಾರ್ವಜನಿಕ ಕಾಮಗಾರಿಗಳು (Public Works)	
ಆಯವ್ಯಯ ಸಂಕೇತ (Budget Code)	05–220415
ವಿವರಗಳು (Particulars)	ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ ಕೆನ್ನಲ್ಸ್, ದನಗಳ ದೊಡ್ಡಿ ಮತ್ತು ಪ್ರಾಣಿಗಳ ಸಂತಾನ ಹರಣ ಕೇಂದ್ರಗಳು ಪಿ.3229, ಪಿ.3570 Repairs & Maintenance-Buildings kennels, Cattle Pounds and Animal Birth Control Centers - P 3229,P3570
ಆಯವ್ಯಯ ಅಂದಾಜು (Budget Estimates) ರೂ. ಲಕ್ಷಗಳಲ್ಲಿ–Rs. In Lakhs	**150.00**

1. ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ ಕಟ್ಟಡದ ದುರಸ್ತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ ಇಲ್ಲಿಯ ಕಟ್ಟಡವು ಶಿಥಿಲಾವಸ್ತೆಯಲ್ಲಿದ್ದು, ಸದರಿ ಕಟ್ಟಡ ಮತ್ತು ಆವರಣದ ದುರಸ್ತಿ ಕಾಮಾಗಾರಿಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.1,00,00,000/–**(ಒಂದು ಕೋಟಿ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

Repair and Renovation of City Cattle Pound, Usmaankhan Road		
SL. No.	**PARTICULARS**	**Estimated Cost in Rs.**
1	DISMANTLING WORK	352075.11
2	CONSTRUCTION OF BUILDING WORK	6967686.60
3	PLUMBING WORK	485701.22
4	BOREWELL	892677.02
5	ELECTRICAL	640095.00
6	MISCELLANEOUS	661765.05
Total		1,00,00,000.00
ರೂಪಾಯಿ ಒಂದು ಕೋಟಿ ಮಾತ್ರ		

2. ವಲಯ ಎಬಿಸಿ ಕೇಂದ್ರಗಳ ದುರಸ್ತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನಾ ವಿಭಾಗದ ಕಾರ್ಯಕ್ರಮವಾದ ಬೀದಿನಾಯಿಗಳ ಶಸ್ತ್ರಚಿಕಿತ್ಸೆ ನೆರವೇರಿಸುವ ಸಂತಾನಹರಣ ಶಸ್ತ್ರಚಿಕಿತ್ಸಾ ಕೇಂದ್ರಗಳ (ಎಬಿಸಿ ಕೇಂದ್ರಗಳು) ಪೇಂಟಿಂಗ್, ಎಲೆಕ್ಟ್ರಿಕಲ್, ವೆಲ್ಡಿಂಗ್, ಪ್ಲಂಬಿಂಗ್ ಹಾಗು ಇನ್ನಿತರ ದುರಸ್ತಿ ಕಾಮಾಗಾರಿಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.50,00,000/–** (ಐವತ್ತು ಲಕ್ಷ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

Sl.No	**Zones / ABC Centre**	**Estimated Cost**
1	Yelahanka (Mediagrahara)	30,00,000.00
2	Dasarahally (Shettihally)	20,00,000.00
Total		**50,00,000.00**
ರೂಪಾಯಿ ಐವತ್ತು ಲಕ್ಷ ಮಾತ್ರ		

IV.

07 – ಸಾರ್ವಜನಿಕ ಆರೋಗ್ಯ (Public Health - General)	
ಆಯವ್ಯಯ ಸಂಕೇತ (Budget Code)	07–220410
ವಿವರಗಳು (Particulars)	ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆ ಕಸಾಯಿಖಾನೆ – ಪಿ.2166 Repairs & Maintenance Buildings Slaughter Houses/Abattoir P2166
ಆಯವ್ಯಯ ಅಂದಾಜು (Budget Estimates) ರೂ. ಲಕ್ಷಗಳಲ್ಲಿ – Rs. In Lakhs	**65.00**

1. ಪಾಲಿಕೆಯ ವಧಾಗಾರಗಳ ನಿರ್ವಹಣೆಗೆ ಮಾನವ ಸಂಪನ್ಮೂಲ ಪೂರೈಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಧಾಗಾರಗಳಿಗೆ (ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ & ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ) ಕಾವಲುಗಾರರು, ಜವಾನರು ಮತ್ತು ಸ್ವಚ್ಛತಾ ಸಿಬ್ಬಂದಿಗಳನ್ನು (ಮಾನವ ಸಂಪನ್ಮೂಲ) ಹೊರಗುತ್ತಿಗೆಯಡಿ ಪೂರೈಸಲು 2024-25ನೇ ಸಾಲಿನಲ್ಲಿ ಅಂದಾಜು **ರೂ.46,16,377.00/-** (ನಲವತ್ತಾರು ಲಕ್ಷದ ಹದಿನಾರು ಸಾವಿರದ ಮೂರು ನೂರ ಎಪ್ಪತ್ತೇಳು) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

Sl No.	Name	Salary per Month (Basic +VDA)	ESI 3.25%	PF (13%)	Salary per Month including ESI &PF	Service Charges 3% / person per month	Sub Total (3+4+5+7)	Total Number	Total Salary/ month	Total Salary for 12 months
1	2	3	4	5	6	7	8	9	10	11
1	Security Guards	16,198.22	526.44	1,950.00	18,674.66	560.24	19,234.90	12	2,30,818.82	27,69,825.89
2	Cleaners	16,198.22	526.44	1,950.00	18,674.66	560.24	19,234.90	5	96,174.5	11,54,094.00
3	Peons	16,198.22	526.44	1,950.00	18,674.66	560.24	19,234.90	3	57,704.7	6,92,456.4
Total								**20**	**3,84,698.02**	**46,16,376.29**
ರೂಪಾಯಿ ನಲವತ್ತಾರು ಲಕ್ಷದ ಹದಿನಾರು ಸಾವಿರದ ಮೂರು ನೂರ ಎಪ್ಪತ್ತೇಳು ಮಾತ್ರ										

❖ ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: KAE 106 LWA 2021 dated:28-07-2022 ಪ್ರಕಾರ ನಿಗಧಿಪಡಿಸಿರುವ ಕನಿಷ್ಠ ವೇತನಕ್ಕೆ ಅನುಗುಣವಾಗಿ

2. ಪಾಲಿಕೆಯ ವಧಾಗಾರಗಳ ಅವಶ್ಯವಿರುವ ರಾಸಾಯನಿಕಗಳು ಮತ್ತು ಸ್ವಚ್ಛತಾ ಸಾಮಗ್ರಿಗಳ ಖರೀದಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಧಾಗಾರಗಳಿಗೆ (ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ & ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ) ಕಾವಲುಗಾರರು, ಜವಾನರು ಮತ್ತು ಸ್ವಚ್ಛತಾ ಸಿಬ್ಬಂದಿಗಳನ್ನು (ಮಾನವ ಸಂಪನ್ಮೂಲ) ಹೊರಗುತ್ತಿಗೆಯಡಿ ಪೂರೈಸಲು 2024-25ನೇ ಸಾಲಿನಲ್ಲಿ ಅಂದಾಜು **ರೂ. 7,97,500.00/-** (ಏಳು ಲಕ್ಷದ ತೊಂಬತ್ತೇಳು ಸಾವಿರದ ಐದು ನೂರು) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ				
ಕ್ರಸಂ	ರಾಸಾಯನಿಕಗಳ ವಿವರ	ಪ್ರಮಾಣ	ಅಂದಾಜು ಮೊತ್ತ	ಒಟ್ಟು ಅಂದಾಜು ಮೊತ್ತ
1	Phenoyl – 5Ltr	150	1,000	1,50,000.00
2	Bleaching Powder – 25 kg	100	2,000	2,00,000.00
3	Acetic Acid-500ml x 10	30	400	12,000.00
4	Fuchsine - Basic M.S (Powder) - 25gm x 25	30	300	9,000.00
5	Glycerin - 1lt x 150	150	650	97,500.00
ಒಟ್ಟು				**4,68,500.00**

ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್ ಖಾನ್ ರಸ್ತೆ				
ಕ್ರಸಂ	ರಾಸಾಯನಿಕಗಳ ವಿವರ	ಪ್ರಮಾಣ	ಅಂದಾಜು ಮೊತ್ತ	ಒಟ್ಟು ಅಂದಾಜು ಮೊತ್ತ
1	Phenoyl – 5Ltr	120	1,000	1,20,000.00
2	Bleaching Powder – 25 kg	50	2,000	1,00,000.00
3	Acetic Acid-500ml x 10	10	400	4,000.00
4	Fuchsine - Basic M.S (Powder) - 25gm x 25	25	300	7,500.00
5	Glycerin - 1lt x 150	150	650	97,500.00
ಒಟ್ಟು				**3,29,000.00**

3. ವಿಚಕ್ಷಣ ದಳ ವಾಹನಗಳ (Sqad) ಹೊರಗುತ್ತಿಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಲಯಗಳಲ್ಲಿ ಅನಧಿಕೃತ ಪ್ರಾಣಿ ವಧೆಯನ್ನು ತಡೆಗಟ್ಟಲು ಮತ್ತು ಮಾಂಸ ಮಾರಾಟ ಮಳಿಗೆಗಳ ತಪಾಸಣೆಗೆ ವಲಯ ಸಹಾಯಕ ನಿರ್ದೇಶಕರು (ಪಶುಪಾಲನೆ) ಹಾಗೂ ಸಿಬ್ಬಂದಿಯವರಿಗೆ ಅವಶ್ಯವಿರುವ ವಿಚಕ್ಷಣ ದಳ ವಾಹನಗಳ (Sqad) ಹೊರಗುತ್ತಿಗೆ ಪೂರೈಕೆಗೆ 2024–25ನೇ ಸಾಲಿನಲ್ಲಿ ಅಂದಾಜು **ರೂ.10,86,120/–** (ಹತ್ತು ಲಕ್ಷದ ಎಂಬತ್ತಾರು ಸಾವಿರದ ನೂರ ಇಪ್ಪತ್ತು) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಪ್ರತಿ ಎರಡು ವಲಯಗಳಿಗೆ ಒಂದರಂತೆ ಪಾಲಿಕೆ ವ್ಯಾಪ್ತಿಯ ಎರಡು ಕಸಾಯಿಖಾನೆಗಳಿಗೆ (ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಟ್ಯಾನರಿ ರಸ್ತೆ ಮತ್ತು ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ) ವಿಚಕ್ಷಣ ದಳ ವಾಹನಗಳ (Sqad) ಹೊರಗುತ್ತಿಗೆ ವಾಹನವನ್ನು ಒದಗಿಸುವುದು.

ಮಾಸಿಕ ಒಂದು ವಾಹನಕ್ಕೆ – 45,255/– ರೂಗಳು (ಹೊರಗುತ್ತಿಗೆ ವಾಹನ: ವಾಹನ+ಇಂಧನ+ಚಾಲಕ)

ವಿವರ	ವಿಚಕ್ಷಣ ದಳ ವಾಹನಗಳ (Sqad) ಹೊರಗುತ್ತಿಗೆ ಪೂರೈಕೆ				ಒಟ್ಟು
ಕಸಾಯಿಖಾನೆ	ನಾ.ಮಾಂ.ಉ&ಸಂ. ಕೇಂದ್ರ, ಟ್ಯಾನರಿ ರಸ್ತೆ		ನ.ಮಾಂ.ಉ& ಸಂ.ಕೇಂದ್ರ, ಉಸ್ಮಾನ್ ಖಾನ್ ರಸ್ತೆ		
ವಲಯ	ಪೂರ್ವ & ಬೊಮ್ಮನಹಳ್ಳಿ	ಮಹದೇವಪುರ & ಯಲಹಂಕ	ಆರ್.ಆರ್.ನಗರ & ದಾಸರಹಳ್ಳಿ	ದಕ್ಷಿಣ & ಪಶ್ಚಿಮ	
ಮೊತ್ತ	45,255 x 6 ತಿಂಗಳು = 2,71,530	45,255 x 6 ತಿಂಗಳು = 2,71,530	45,255 x 6 ತಿಂಗಳು = 2,71,530	45,255 x 6 ತಿಂಗಳು = 2,71,530	**10,86,120.00**
ರೂಪಾಯಿ ಹತ್ತು ಲಕ್ಷದ ಎಂಬತ್ತಾರು ಸಾವಿರದ ನೂರ ಇಪ್ಪತ್ತು ಮಾತ್ರ					

V.

07 – ಸಾರ್ವಜನಿಕ ಆರೋಗ್ಯ (Public Health - General)	
ಆಯವ್ಯಯ ಸಂಕೇತ (Budget Code)	07–222119
ವಿವರಗಳು (Particulars)	ಶವಸಾಗಾಣಿಕೆ ವಾಹನ, ನೀರಿನ ಟ್ಯಾಂಕರ್, ದನ ಹಿಡಿಯುವ ವಾಹನಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಪಿ.3887 Operation and Maintenance of Hears Van/water tankers/Cattle Catching vehicles P3887
ಆಯವ್ಯಯ ಅಂದಾಜು (Budget Estimates) ರೂ. ಲಕ್ಷಗಳಲ್ಲಿ – Rs. In Lakhs	**160.00**

1. ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ ನಿರ್ವಹಣೆಗೆ ಮಾನವ ಸಂಪನ್ಮೂಲ ಪೂರೈಕೆ

ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ, ಬಿಬಿಎಂಪಿ ಬೆಂಗಳೂರು ಇಲ್ಲಿನ ದನ ಹಿಡಿಯುವ ಭಾರಿ ವಾಹನಗಳಿಗೆ ಚಾಲಕರು. ಅರೆ ಕುಶಲ ಕಾರ್ಮಿಕರು, ಕುಶಲ ಕಾರ್ಮಿಕರು, ಸಹಾಯಕರು ಹಾಗೂ ಪ್ರಾಣಿ ಸಂರಕ್ಷಣಾ ವಾಹನಗಳಿಗೆ ಚಾಲಕರು ಮುಂತಾದವುಗಳಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆಯಡಿ ಪೂರೈಸಲು ನೊಂದಾಯಿತ ಮಾನವ ಸಂಪನ್ಮೂಲ ಪೂರೈಕೆದಾರರಿಂದ ಟೆಂಡರ್ ಆಹ್ವಾನಿಸಲು 2024-25ನೇ ಸಾಲಿನಲ್ಲಿ ಅಂದಾಜು ರೂ. 75,12,740.00/- (ಎಪ್ಪತ್ತೈದು ಲಕ್ಷದ ಹನ್ನೆರಡು ಸಾವಿರದ ಏಳು ನೂರ ನಲವತ್ತು) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

Sl No.	Name	Salary per Month (Basic +VDA)	ESI (3.25%)	PF (13%)	Salary per Month including ESI &PF	Service Charges 3% per person per month	Sub Total (3+4+5+7)	Total Number of persons	Total Salary per month	Total Salary for 12 months
1	2	3	4	5	6	7	8	9	10	11
1	Driver for Cattle catching Vehicle	**17,335.62**	**563.41**	**1,950.00**	**19,849.03**	**595.47**	**20,444.50**	**1**	**20,444.50**	**2,45,333.98**
2	Attender for Cattle catching unskilled	**16,198.22**	**526.44**	**1,950.00**	**18,674.66**	**560.24**	**19,234.90**	**12**	**2,30,818.82**	**27,69,825.89**
3	Attender for Cattle pound	**16,198.22**	**526.44**	**1,950.00**	**18,674.66**	**560.24**	**19,234.90**	**6**	**1,15,409.41**	**13,84,912.95**
4	Driver for Animal Rescue + Squad Vehicle	**17,335.62**	**563.41**	**1,950.00**	**19,849.03**	**595.47**	**20,444.50**	**3**	**61,333.50**	**7,36,001.95**
5	Attender for Animal Rescue + Squad Vehicle	**16,198.22**	**526.44**	**1,950.00**	**18,674.66**	**560.24**	**19,234.90**	**6**	**1,15,409.41**	**13,84,912.95**
6	Attender for Cattle catching **skilled**	**17,539.67**	**570.04**	**1,950.00**	**20,059.71**	**601.79**	**20,661.50**	**4**	**82,646.00**	**9,91,752.03**
Total								32	6,26,061.64	75,12,739.73
ರೂಪಾಯಿ ಎಪ್ಪತ್ತೈದು ಲಕ್ಷದ ಹನ್ನೆರಡು ಸಾವಿರದ ಏಳು ನೂರ ನಲವತ್ತು ಮಾತ್ರ										

- ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: KAE 31 LMW 2017 dated:30-12-2017 & KAE 106 LWA 2021 dated:28-07-2022 ಪ್ರಕಾರ ನಿಗಧಿಪಡಿಸಿರುವ ಕನಿಷ್ಠ ವೇತನಕ್ಕೆ ಅನುಗುಣವಾಗಿ.

2. ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ ನಿರ್ವಹಣೆಗೆ ಅವಶ್ಯವಿರುವ ರಾಸಾಯನಿಕಗಳು ಮತ್ತು ಸ್ವಚ್ಛತಾ ಸಾಮಗ್ರಿಗಳ ಪೂರೈಕೆ

ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ, ಬಿಬಿಎಂಪಿ ಬೆಂಗಳೂರು ಇಲ್ಲಿನ ದೊಡ್ಡಿಯ ಆವರಣ ಮತ್ತು ಮೂರು ಭಾರಿ ದನ ಹಿಡಿಯುವ ವಾಹನಗಳನ್ನು ಶುಚಿಗೊಳಿಸಲು ಅವಶ್ಯವಿರುವ ರಾಸಾಯನಿಕಗಳು ಹಾಗು ಸ್ವಚ್ಛತಾ ಸಾಮಗ್ರಿಗಳ ಖರೀದಿಗೆ 2024-25ನೇ ಸಾಲಿನಲ್ಲಿ ಅಂದಾಜು ರೂ. **4,30,000.00/-** (ನಾಲ್ಕು ಲಕ್ಷದ ಮೂವತ್ತು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರಸಂ	ರಾಸಾಯನಿಕಗಳ ವಿವರ	ಪ್ರಮಾಣ	ಅಂದಾಜು ಮೊತ್ತ	ಒಟ್ಟು ಅಂದಾಜು ಮೊತ್ತ
1	Phenoyl – 5Ltr	120	1,000	1,20,000.00
2	Bleaching Powder – 25 kg	150	2,000	3,00,000.00
3	Broomsticks	200	50	10,000.00
ಒಟ್ಟು				**4,30,000.00**
ರೂಪಾಯಿ ನಾಲ್ಕು ಲಕ್ಷದ ಮೂವತ್ತು ಸಾವಿರ ಮಾತ್ರ				

3. ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ ಇಲ್ಲಿಯ ಕಛೇರಿಗೆ ವಾಹನ ಖರೀದಿ

ಪಾಲಿಕೆಯ ವ್ಯಾಪ್ತಿಯಲ್ಲಿನ ಬಿಡಾಡಿ ದನಗಳ ನಿಯಂತ್ರಣ ಕಾರ್ಯಕ್ಕೆ ಕೇವಲ ಒಂದು ದನದ ದೊಡ್ಡಿಯು ಕಾರ್ಯನಿರ್ವಹಿಸುತ್ತಿರುತ್ತದೆ. ಪ್ರತಿದಿನ ಸಾರ್ವಜನಿಕರಿಂದ ಸ್ವೀಕರಿಸುವ ದೂರುಗಳಿಗೆ ಸ್ಪಂದಿಸುವುದು, ಜಾನುವಾರುಗಳ ಮಾಲೀಕರಿಗೆ ದಂಡ ವಿಧಿಸುವುದು, ಮಾಲೀಕರಿಲ್ಲದ ರಾಸುಗಳನ್ನು ಗೋಶಾಲೆಗೆ ಬಿಡುವುದು ಹಾಗು ಆಕ್ರಮಣಕಾರಿ ಎತ್ತು/ಹೋರಿ/ದನಗಳನ್ನು ಸಂರಕ್ಷಿಸಿ ಗೋಶಾಲೆಗೆ ಹಸ್ತಾಂತರಿಸುವುದು ಇನ್ನಿತರ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಪಾಲಿಕೆಯ ವ್ಯಾಪ್ತಿಯಲ್ಲಿನ ಯಾವುದೇ ಭಾಗದ ದೂರುಗಳ ಸ್ಪಂದನೆಗೆ ಹಾಗೂ ಆಕ್ರಮಣಕಾರಿ ಎತ್ತು/ಹೋರಿ/ದನಗಳ ಕಾರ್ಯಾಚರಣೆಗೆ ನೆರವಾಗಲು ಸದರಿ ಸಂಸ್ಥೆಗೆ ಒಂದು ವಾಹನದ ಅವಶ್ಯಕತೆ ಇರುತ್ತದೆ. ಪಾಲಿಕೆಯ ನಗರ ದನದ ದೊಡ್ಡಿ, ಉಸ್ಮಾನ್‌ಖಾನ್ ರಸ್ತೆ ಇಲ್ಲಿಯ ಕಛೇರಿಗೆ ಅವಶ್ಯವಿರುವ ನಾಲ್ಕು ಚಕ್ರದ ವಾಹನ (ಕಾರು) ಖರೀದಿಗೆ 2024-25ನೇ ಸಾಲಿನಲ್ಲಿ ಅಂದಾಜು ರೂ. **7,20,000.00/-** (ಏಳು ಲಕ್ಷದ ಇಪ್ಪತ್ತು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರಸಂ	ವಿವರ	ಅಂದಾಜು ಮೊತ್ತ
1	ನಾಲ್ಕು ಚಕ್ರದ ವಾಹನ	7,20,000.00
ಒಟ್ಟು		**7,20,000.00**
ರೂಪಾಯಿ ಏಳು ಲಕ್ಷದ ಇಪ್ಪತ್ತು ಸಾವಿರ ಮಾತ್ರ		

4. ಪಾಲಿಕೆಯ ವ್ಯಾಪ್ತಿಯಲ್ಲಿನ ಆಕ್ರಮಣಕಾರಿ ಎತ್ತು/ಹೋರಿ/ದನಗಳನ್ನು ಹಿಡಿಯಲು ಅವಶ್ಯವಿರುವ ಔಷಧ ಮತ್ತು ಸಾಮಗ್ರಿಗಳ ಪೂರೈಕೆ

ಪಾಲಿಕೆಯ ವ್ಯಾಪ್ತಿಯಲ್ಲಿನ ಆಕ್ರಮಣಕಾರಿ ಎತ್ತು/ಹೋರಿ/ದನಗಳನ್ನು ಹಿಡಿದು ಅವುಗಳನ್ನು ನಗರ ದನದ ದೊಡ್ಡಿಯ ವಾಹನಗಳಲ್ಲಿ ಗೋಶಾಲೆಗೆ ಸಾಗಿಸಲು ಅವಶ್ಯವಿರುವ ಅರವಳಿಕೆ ಔಷಧಗಳು, ಸಾಮಗ್ರಿಗಳು

ಮತ್ತು ಇನ್ನಿತರ ಉಪಕರಣಗಳ ಖರೀದಿಗೆ 2024-25ನೇ ಸಾಲಿನಲ್ಲಿ ಅಂದಾಜು **ರೂ.3,25,000/-** (ಮೂರು ಲಕ್ಷದ ಇಪ್ಪತ್ತೈದು ಸಾವಿರ) ಗಳ ಅವಶ್ಯಕತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ಅಂದಾಜು ಮೊತ್ತ
1	Anaesthetics / Tranquilizers / Sedatives and Antidotes (ಅರವಳಿಕೆ ಮದ್ದುಗಳು) – Xylazine, Ketamine, Butorphanol, Doxapram, Yohimbine etc.,	1,50,000
2	Blow Gun / Gun with complete accessories (barrel cleaning set, carry bag, blowpipe needle, training needle, filling & care kit) and Pole Syringe & Jab - Stick with Accessories	1,50,000
3	Big Ropes, Belts and other accessories	25,000
	ಒಟ್ಟು	3,25,000.00
	ರೂಪಾಯಿ ಮೂರು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ	

5. ಪಾಲಿಕೆಯ ವ್ಯಾಪ್ತಿಯಲ್ಲಿನ ಆಕ್ರಮಣಕಾರಿ ಎತ್ತು/ಹೋರಿ/ದನಗಳನ್ನು ಹಿಡಿಯಲು ಅವಶ್ಯವಿರುವ ವಾಹನ ಖರೀದಿ

